# ಸೋದರಿ ನಿವೇದಿತಾ ಮತ್ತು ಶ್ರೀ ಆನಂದ ಕುಮಾರಸ್ವಾಮಿ ಸಹಸಂಪಾದಿತ
# 'Myths and Legends of Hindus and Budhists'
## – ಒಂದು ಪರಿಚಾಯಾತ್ಮಕ ಪರಾಮರ್ಶೆ –

'ವಿನಾಭ' ಮೈಸೂರು


ಭಾರತೀಯ ಪೌರಾಣಿಕ ಕಥಾನಕಗಳನ್ನು ಪಾಶ್ಚಾತ್ಯ ಓದುಗರಿಗೆ ಪರಿಚಯಿಸಲು ಸುಂದರವಾಗಿ ನಿರೂಪಿಸಿದ ಕೃತಿಯೇ ' Myths and Legends of Hindus and Budhists'. ಈ ಕೃತಿಯನ್ನು ಪರಾಮರ್ಶಿಸಿರುವ ಲೇಖಕರು (ಶ್ರೀ ವಿಜಯನಾಥ ಭಟ್, 'ಕೌಂಡಿಣ್ಯ') ರಾಷ್ಟ್ರೀಕೃತ ಬ್ಯಾಂಕಿಂಗ್ ಸಂಸ್ಥೆಯೊಂದರ ಉಚ್ಚ ಅಧಿಕಾರಿಯಾಗಿದ್ದು ಈಗ ನಿವೃತ್ತರಾಗಿದ್ದಾರೆ. ಆಂಗ್ಲ, ಕನ್ನಡ ಎರಡೂ ಭಾಷೆಗಳಲ್ಲಿ, ಗದ್ಯ-ಪದ್ಯ ಎರಡೂ ಪ್ರಕಾರಗಳಲ್ಲಿ ಪರಿಣತರಾಗಿರುವ ಅವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಭಕ್ತರು.

### ಪುಸ್ತಕ ಪ್ರವೇಶ

ಈ ಪುಸ್ತಕದ ಜವಾಬುದಾರಿಯನ್ನು ಪ್ರಾಥಮಿಕವಾಗಿ ಹೊತ್ತ ಸೋದರಿ ನಿವೇದಿತಾಳನ್ನು ಪಾಶ್ಚಿಮಾತ್ಯ ಅಥವಾ ಭಾರತೀಯ ಸಜ್ಜನರಿಗೆ ಪರಿಚಯಿಸುವುದು ವ್ಯರ್ಥ ಕಾಯಕ. ಶ್ರೀರಾಮಕೃಷ್ಣ ಪರಮಹಂಸರ ಪರಮಶಿಷ್ಯರಾದ, ಭಾರತದ ಕಣ್ಮಣಿ, ಶ್ರೀ ವಿವೇಕಾನಂದರ ಪರಮವಿಶ್ವಸನೀಯ ಅನುಯಾಯಿಯಾಗಿ ಭಾರತಕ್ಕೆ ಬಂದ ಈ ಮಹಿಳಾರತ್ನ, ಭಾರತದ ಜನಜೀವನ ಮತ್ತು ಸಾಹಿತ್ಯಕ್ಕೆ ಅತ್ಯಮೂಲ್ಯವಾದ ಪಾಶ್ಚಿಮಾತ್ಯ ಪ್ರಶಿಕ್ಷಣ ಮತ್ತು ಸಮಾಜ ವಿಜ್ಞಾನದ ಸೌರಭವನ್ನು ತಂದಿತ್ತಳು ಮಾತ್ರವಲ್ಲ ತನ್ನ ದತ್ತು ರಾಷ್ಟ್ರವಾದ ಭಾರತದ ಜನಮನ ಮತ್ತು ಜನಾದರ್ಶಗಳ ಪರಿಪೋಷಣೆಯ ಕೈಂಕರ್ಯದಲ್ಲಿ ಅದಮ್ಯ ಉತ್ಸಾಹವನ್ನು ತುಂಬಿದಳು. ಅವಳ ಮುಖ್ಯ ಕೃತಿಯಾದ 'The web of Indian Life' ಪ್ರಾಯಶಃ ಹಿಂದೂ ಸಮಾಜದ ಬಗೆಗೆ ಆಂಗ್ಲ ಭಾಷೆಯಲ್ಲಿ ಅಲ್ಲಿಯವರೆಗೆ ಬರೆಯಲಾಗಿದ್ದ ಒಂದೇ ಒಂದು ವಸ್ತುನಿಷ್ಠ ನಿರೂಪಣೆ ಮತ್ತು 'Kali, the Mother'- ಅಲ್ಲಿಯೂ ಮೊದಲ ಬಾರಿಗೆ - ಭಾರತದ ಮಾತೃ ಸಂಪ್ರದಾಯದ ತೀವ್ರ, ಸುಕೋಮಲತೆ ಮತ್ತು ಅತಿ ರೌದ್ರ ಚಿತ್ರವನ್ನು - ಅದರ ನಿಜವಾದ ಧಾರ್ಮಿಕ ಆಯಾಮಗಳನ್ನು ಪಾಶ್ಚಿಮಾತ್ಯ ಓದುಗರ ಮನಂಬುಗುವಂತೆ ಬರೆದ ಕೃತಿ - ಇವೆರಡೂ ಅವಳ ಅಸಾಧಾರಣ ವಿದ್ವತ್ತು, ಬುದ್ಧಿಮತ್ತೆ ಮತ್ತು ಒಂದು ಪರಕೀಯ ಸಂಸ್ಕೃತಿಯ ಅಧ್ಯಯನಶೀಲತೆಗಳಿಗೆ ಹಿಡಿದ ಕನ್ನಡಿಯಂತಿವೆ. ಇಂತಹ ಪುಸ್ತಕಗಳ ಮೂಲಕ ಆಕೆ ಕೇವಲ ಭಾರತೀಯತೆಯನ್ನು ಪಾಶ್ಚಿಮಾತ್ಯರಿಗೆ ಸರಿಯಾಗಿ ಅರ್ಥೈಸಲು ಸಹಕರಿಸಿದುದು ಮಾತ್ರವಲ್ಲ; ಭಾರತದ ನಿಜವಾದ ಪುನರುತ್ಥಾನ ಬರೇ ರಾಜಕೀಯ ಗುದ್ದಾಟಗಳಿಂದ ಅಲ್ಲ, ಅದು ರಾಷ್ಟ್ರೀಯ ಆದರ್ಶಗಳು, ಧಾರ್ಮಿಕ ಆಚರಣೆ ಮತ್ತು ಕಲೆಗಳಲ್ಲಿ ಬಿಂಬಿತವಾದ ಮೂಲೋದ್ದೇಶಗಳನ್ನು ಆಧರಿಸಬೇಕೆಂದು ನಂಬುವ, ಮತ್ತು ಇವುಗಳ ಪಾಶ್ಚಾತ್ಯೀಕರಣಕ್ಕೆ ಮನಸೋಲದ, ಒಂದು ಹೊಸ ಶಿಕ್ಷಾರ್ಥಿ ಜನಾಂಗವನ್ನು ಸೃಷ್ಟಿಸುವಲ್ಲಿ ಒಂದು ಮಹತ್ತರ ಕೊಡುಗೆಯನ್ನು ಆಕೆ ನೀಡಿದಳು.

೧೯೧೧ರಲ್ಲಿ ಸೋದರಿ ನಿವೇದಿತಾಳ ಅಸಾಮಯಿಕ ಮೃತ್ಯು ಈ ಪುಸ್ತಕವನ್ನು ಪೂರ್ಣಗೊಳಿಸಲು ಇನ್ನೊಬ್ಬ ವ್ಯಕ್ತಿಯ ಸೃಜನಶೀಲತೆ ಮತ್ತು ಪರಿಶ್ರಮದ ಕೊಡುಗೆಯನ್ನು ಅವಶ್ಯವಾಗಿಸಿತು. ಅವಳ ನಿಧನದ ವೇಳೆಗೆ ಈ ಪುಸ್ತಕದ ಕೇವಲ ಮೂರನೇ ಒಂದಂಶ

ಕೃತಿಯ ರಕ್ಷಾಪುಟ



ದಷ್ಟು ಕರಡು ಮಾತ್ರ ಸಿದ್ಧವಾಗಿತ್ತು. ಉಳಿದ ಸುಮಾರು ಎರಡನೇ ಮೂರು ಭಾಗದಷ್ಟು ಬರವಣಿಗೆ, ಸೋದರಿಯ ಸಹಕರ್ತೃವಾದ ಶ್ರೀ ಆನಂದ ಕೆ. ಕುಮಾರಸ್ವಾಮಿಯವರ ಮಡಿಲಿಗೆ ಬಿತ್ತು.

ಈ ಸಂಧಿಯಲ್ಲಿ ಶ್ರೀ ಕುಮಾರಸ್ವಾಮಿಯವರನ್ನು (೧೮೭೭–೧೯೪೭) ಪರಿಚಯಿಸದಿದ್ದರೆ ಅಪಚಾರವಾದೀತು. ಶ್ರೀಲಂಕಾದಲ್ಲಿನ ಒಂದು ಗೌರವಾನ್ವಿತ ಕುಟುಂಬದಲ್ಲಿ ಜನಿಸಿದ್ದ ಕುಮಾರಸ್ವಾಮಿಯವರ ಪಾಂಡಿತ್ಯ ಮತ್ತು ಆಸಕ್ತಿ, ಸಸ್ಯಶಾಸ್ತ್ರ, ಭೂಗರ್ಭ ವಿಜ್ಞಾನದಿಂದ ಹಿಡಿದು ಲಲಿತಕಲೆ ಮತ್ತು ಆಧ್ಯಾತ್ಮಿಕ ಅಧ್ಯಯನದವರೆಗೂ ಚಾಚಿತ್ತು. ತಂದೆ ಮುತ್ತುಕುಮಾರಸ್ವಾಮಿಯನ್ನು ತನ್ನ ಎರಡನೇ ವಯಸ್ಸಿಗೆ ಕಳೆದುಕೊಂಡಾಗ ಆತನ ತಾಯಿ, ಎಲಿಜಬೆತ್ ಬೀಬಿ, ಮಗುವನ್ನು ತನ್ನ ಹುಟ್ಟೂರಾದ ಇಂಗ್ಲೆಂಡಿಗೆ ಕರೆದುಕೊಂಡು ಹೋದಳು. ಆನಂದರಿಗೆ ಮೂವತ್ತಕ್ಕೂ ಅಧಿಕ ಭಾಷೆಗಳಲ್ಲಿ ಪ್ರಬುದ್ಧತೆ ಸಿದ್ಧಿಸಿತ್ತು. ದಕ್ಷಿಣ ಏಷಿಯಾದ ಚಿತ್ರಕಲೆಗಳ ಅಧ್ಯಯನದಲ್ಲಂತೂ ಅವರ ಕೊಡುಗೆ ವಿಶೇಷವಾಗಿತ್ತು. ಅವರು ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿತಮ್ಮನ್ನು ಆಳವಾಗಿ ತೊಡಗಿಸಿಕೊಂಡಿದ್ದು, ಪ್ರಥಮ ಜಾಗತಿಕ ಯುದ್ಧದಲ್ಲಿ ಬ್ರಿಟಿಷರ ಪರ ಹೋರಾಡಲು ನಿರಾಕರಿಸಿದ ಕಾರಣಕ್ಕಾಗಿ, ಬ್ರಿಟಿಷ್ ಸರಕಾರ ಅವರ ಮನೆಯನ್ನು ಮುಟ್ಟುಗೋಲು ಹಾಕಿಕೊಂಡು ಅವರನ್ನು ಬ್ರಿಟಿಷ್ ಸಾಮ್ರಾಜ್ಯದಿಂದ ಗಡೀಪಾರು ಮಾಡಿತು. ಹೀಗಾಗಿ ಅವರು ಕೊನೆಯ ತನಕ, ಅಂದರೆ ೧೯೪೭ರಲ್ಲಿ ಅವರು ಕಾಲವಾಗುವ ತನಕ, ಅಮೆರಿಕಾದಲ್ಲೇ ಉಳಿದುಕೊಂಡರು.

ಅವರು ತಮ್ಮ ಜೀವಿತ ಕಾಲದಲ್ಲಿ ಭಾರತದ ರವೀಂದ್ರನಾಥ ಟಾಗೋರರಂಥ ಹಿರಿಯ ಚೇತನಗಳ ಪ್ರಭಾವಲಯದಲ್ಲಿ ಸಚೇತ ಸಕ್ರಿಯರಾಗಿದ್ದು ಭಾರತೀಯ ಚಿತ್ರಕಲೆಗಳ, ಅದರಲ್ಲೂ ರಜಪೂತ ಮತ್ತು ಮುಘಲ್ ಶೈಲಿಯ ಚಿತ್ರಗಳ ಒಂದು ದೊಡ್ಡ ಸಂಗ್ರಹವನ್ನೇ ಮಾಡಿದ್ದರು. ವಿವಿಧ ಶೈಲಿಯ ಚಿತ್ರಕಲೆಗಳ ವಿಮರ್ಶೆ ಮತ್ತು ರಸಾಸ್ವಾದನೆಯಲ್ಲಿ ಅಪಾರ ಕೊಡುಗೆಯನ್ನು ನೀಡಿದುದು ಮಾತ್ರವಲ್ಲ, ಆ ವಿಷಯದ ಮೇಲೆ ಮತ್ತು ಸ್ವದೇಶಿ ಚಳುವಳಿಯ ಕುರಿತಾಗಿ ವಿಪುಲವಾದ ಬರಹಗಳನ್ನು ಬರೆದಿದ್ದರು. ಅವರನ್ನು ಕುರಿತು ಹೆನ್ರಿಚ್ ಝಿಮ್ಮರನು ಒಮ್ಮೆ, ''ಆ ಅನುಪಮ ಪ್ರಕೃತಿಯ ಹೆಗಲ ಮೇಲೆ ನಾವು ನಿಂತಿದ್ದೇವೆ'' ಎಂದು ಶ್ಲಾಘಿಸಿದನು. ಅವನ ಭಕ್ತಿಯ ಕಾಯಕವಲ್ಲದಿದ್ದರೆ ಇಂತಹ ಅಮೂಲ್ಯ ಕೃತಿ ಪ್ರಕಾಶನದ ಬೆಳಕು ಕಾಣುವುದು ಸಾಧ್ಯವಾಗುತ್ತಿರಲಿಲ್ಲ.

## ಪುಸ್ತಕದೊಳಗಿನ ಹೂರಣ


ಈ ಪುಸ್ತಕದಲ್ಲಿ ಎಂಟು ಖಂಡಗಳಿದ್ದು ೨ ರಿಂದ ೭ನೇ ವರೆಗಿನ ಅಧ್ಯಾಯದಲ್ಲಿ ಅನುಕ್ರಮವಾಗಿ ರಾಮಾಯಣ, ಮಹಾಭಾರತ, ಕೃಷ್ಣ, ಬುದ್ಧ, ಶಿವ ಮತ್ತು ಇತರ ಜನಪ್ರಿಯ ಪೌರಾಣಿಕ ಕಥೆಗಳ ಮತ್ತು ದಂತಕಥೆಗಳ ಸಂಗ್ರಹವಿದೆ. ಮೊದಲನೆಯ ಅಧ್ಯಾಯ ಇಂಡೋ–ಆರ್ಯನ್ ಜನಾಂಗದ ಐತಿಹ್ಯದ ಅಧ್ಯಯನಕ್ಕೆ ಮೀಸಲಾಗಿದೆ. ಪುಸ್ತಕದುದ್ದಕ್ಕೂ, ಅಲ್ಲಲ್ಲಿ ಸಂದರ್ಭಾನುಸಾರ, ವಿಶ್ವಮಾನ್ಯ ಚಿತ್ರಕಾರರಾದ ನಂದಲಾಲ ಬಸು (೧೦) ಕರ್ನಾಟಕದ ಮೈಸೂರಿನವರೇ ಆದ ಕೆ.ವೆಂಕಟಪ್ಪ (೭), ಸುರೇಂದ್ರನಾಥ ಕರ್, ಖಿತೀಂದ್ರನಾಥ ಮಜುಮದಾರ (೭) ಅಬನೀಂದ್ರನಾಥ ಟಾಗೋರ್ (೫) ಮತ್ತು ಅಸಿತ್ ಕುಮಾರ್ ಹಲಧರ್ (೧) ಅವರುಗಳ ದೇಣಿಗೆಯಾದ ಅತ್ಯದ್ಭುತ, ಅಮೂಲ್ಯ ಕಲಾಕೃತಿಗಳು ಈ ಪುಸ್ತಕದ ಅಂದವನ್ನು ಮುಮ್ಮಡಿಯಾಗಿಸಿವೆ. ಪುಸ್ತಕದ ಕೊನೆಯಲ್ಲಿ ಕೊಟ್ಟ ಕರ್ತೃ ಮತ್ತು ಚಿತ್ರಕಾರರ ಕಿರುಪರಿಚಯ ಮತ್ತು ಕ್ಲಿಷ್ಟಪದಕೋಶ ಹಾಗೂ ವಿಷಯಾನುಕ್ರಮಣಿಕೆ ಇವು ಪುಸ್ತಕದ ಮೌಲ್ಯವನ್ನು, ಉಪಯುಕ್ತತೆಯನ್ನು ಹೆಚ್ಚಿಸಿವೆ.

### ಕಥಾನಕಗಳು

#### ರಾಮಾಯಣ :

ರಾಮಾಯಣದ ಕರ್ತೃವೆಂದು ಸ್ಮರಿಸಲಾಗುತ್ತಿರುವ ವಾಲ್ಮೀಕಿಯ ಹೆಸರು ಇಲಿಯೆಡ್ ಕರ್ತೃ ಹೋಮರ್‌ನಷ್ಟೇ ವಿಚಾರಾಸ್ಪದವಾಗಿದೆ. ಆತ ಹುಟ್ಟಿನಿಂದ ಬ್ರಾಹ್ಮಣನಾಗಿದ್ದು, ಅಯೋಧ್ಯೆಯ ರಾಜ ಮನೆತನಕ್ಕೆ ಅತಿ ಸಮೀಪವಾಗಿದ್ದ. ಅವನು ರಾಮನಿಗೆ ಸಂಬಂಧಿಸಿದಂತೆ ಹಾಡುಗಳನ್ನು ಮತ್ತು ಆಗ ಪ್ರಚಲಿತ ದಂತಕಥೆಗಳನ್ನು (ಈ ರಾಮನು ಪರಶುರಾಮನಿಗಂತ ಬೇರೆಯಾದವನು ಎಂದು ಸೂಚಿಸಲು ಆತನನ್ನು ನಂತರ ರಾಮಚಂದ್ರ ಎಂದು ಹೆಸ

ಸೀತಾಸ್ವಯಂವರ (ಕಲಾವಿದ : ಮೈಸೂರು ಕೆ.ವೆಂಕಟಪ್ಪ)



ರಿಸಲಾಯಿತು) ಸಂಪಾದಿಸಿಕೊಂಡಿದ್ದು, ಪ್ರಾಯಶಃ ನಂತರ ಅದಕ್ಕೆ ವಿವರಗಳನ್ನು, ವಿಶೇಷವಾಗಿ ಉತ್ತರಕಾಂಡವನ್ನು ಸೇರಿಸಲಾಯಿತು. ಅವನು ಶ್ಲೋಕವನ್ನು ಛಂದಸ್ಸಿನ ಒಂದು ಪ್ರಕಾರವಾಗಿ ಜನಾನು ರಾಗಗೊಳಿಸಿದ್ದನೆಂದು ನಂಬಲಾಗಿದೆ. ರಾಮಾಯಣದ ಕಥೆಯ ಪ್ರಕಾರ, ಆತನು ರಾಮನ ಸಮಕಾಲೀನನಾಗಿದ್ದು, ಸೀತೆಯ ಎರಡ ನೆಯ ವನವಾಸದ ಸಮಯದಲ್ಲಿ ಆಕೆಗೆ ಆಸರೆ ಕೊಟ್ಟು, ಅವಳ ಮಕ್ಕಳಾದ ಲವಕುಶರಿಗೆ ರಾಮಾಯಣವನ್ನು ಕಲಿಸಿದನು ಎಂದೂ ಪ್ರತೀತಿಯಿದೆ.

ಅತಿ ಸ್ಥೂಲ ಮತ್ತು ಸರಳವಾದ ರಾಮಾಯಣದ ಕಥಾವಸ್ತು, ಕಷ್ಟಕ್ಕೆ ಸಿಕ್ಕಿ ನಲುಗಿದ ವಧು ಒಬ್ಬಳನ್ನು ರಕ್ಷಿಸಿದ ಕಥೆ, ಇನ್ನೊಂದು ಮಹಾಗ್ರಂಥವಾದ ಹೋಮರ್ ಕೃತ ಇಲಿಯೆಡ್‌ನ ಕಥಾವಸ್ತು ವಿನೊಂದಿಗೆ ಬಹುಮಟ್ಟಿಗೆ ಹೋಲುತ್ತದೆ. ಕೆಲವೊಂದು ವರ್ತುಲ ಗಳಲ್ಲಿ ಇಲಿಯೆಡ್ ರಾಮಾಯಣದ ಅನುಕರಣೆ ಎಂದೂ ಸೂಚಿಸ ಲಾಗುತ್ತಿದ್ದರೂ ಅದು ಸತ್ಯವಾಗಿರದೆ, ಎರಡೂ ಕೃತಿಗಳು ಸುಮಾರು ಕ್ರಿ.ಪೂ. ಒಂದು ಸಾವಿರ ವರ್ಷದ ಹಿಂದಕ್ಕೆ ಪ್ರಚಲಿತವಾಗಿದ್ದ ಐತಿಹಾಸಿಕ ಘಟನೆಯೊಂದನ್ನು ಆಧರಿಸಬಹುದೆಂಬ ವಾದವೂ ಹೆಚ್ಚು ಸ್ವೀಕಾರಾರ್ಹ.

ರಾಮನ ಕಥೆ, ಅದರ ಹ್ರಸ್ವರೂಪದಲ್ಲಿ ಜಾತಕ ಕಥೆಗಳಲ್ಲೂ ಕಾಣಸಿಗುತ್ತದೆ. ಕ್ರಿಸ್ತಪೂರ್ವದಲ್ಲಿ ರಾಮನ ಕಥೆಯನ್ನು ಒಬ್ಬ ಬ್ರಾಹ್ಮಣ ಕವಿ ಕೈಗೆತ್ತಿಕೊಂಡು, ಅದನ್ನು ಒಂದು ಸರಳ ಸುಂದರವಾದ ಕಥನ ಕಾವ್ಯವಾಗಿ ಹೆಣೆದಿದ್ದು, ನಂತರ ಅದಕ್ಕೆ ಉತ್ತರಕಾಂಡದ ಸೇರ್ಪಡೆಯಾಗಿ ಸಂಪೂರ್ಣ ರಾಮಾಯಣವಾದದ್ದು ಸುಮಾರು ಕ್ರಿ.ಶ. ೪೦೦ರಲ್ಲಿ ಎಂಬ ವಾದದಲ್ಲಿ ಹುರುಳಿಲ್ಲದಿಲ್ಲ. ಅದರ ಅಂತಿಮ ರೂಪದಲ್ಲಿ ಅದು ಹಿಂದೂ ಪುನರುತ್ಥಾನದ ಸಮಯದಲ್ಲಿ ಉಪಲಬ್ಧವಾಗಿದ್ದು, ಅದರಲ್ಲಿ ಪ್ರತಿಬಿಂಬಿತವಾದ ಸಂಸ್ಕೃತಿಗೂ, ನಂತರ ಸುಮಾರು ಒಂದರಿಂದ ಏಳನೇ ಶತಮಾನದ ಅಂತರದಲ್ಲಿ ಸೃಷ್ಟಿಗೊಂಡ ಅಜಂತಾದ ಭಿತ್ತಿಪತ್ರಗಳಲ್ಲಿ ಬಿಂಬಿತವಾದ ಸಂಸ್ಕೃತಿಗೂ ಬಹಳಷ್ಟು ಸಾಮ್ಯವಿರುವುದು ಕಂಡುಬರುತ್ತದೆ. ಆದರೆ ಅದರ ಮೂಲ ಕಥಾವಸ್ತು ಮಾತ್ರ ಅದಕ್ಕಿಂತ ಬಹಳಷ್ಟು ಪ್ರಾಚೀನ ವಾದುದು ಎಂಬುದು ವಿವಾದಾತೀತ. ಈ ಪುಸ್ತಕದಲ್ಲಿ ರಾಮಾ ಯಣದ ರೂಪಕವು ಮೂಲದ ಕೇವಲ ಐದು ಪ್ರತಿಶತದಷ್ಟೇ ಗಾತ್ರ ವಾಗಿದ್ದರೂ ಅದು ಕೊಡಲಾಗಿರುವ ಕಥನದ ಪೂರ್ಣತೆಗೆ ಅತಿ ಅವಶ್ಯವಾದ ವಿವರಗಳನ್ನೆಲ್ಲಾ ತಕ್ಕಷ್ಟು ಮಟ್ಟಿಗೆ ಒಳಗೊಂಡಿದೆ.

**ರಾಮಾಯಣದ ನೀತಿ ತತ್ತ್ವಗಳು :**

ವಾಲ್ಮೀಕಿಯ ಮಹಾಗ್ರಂಥದ ಒಂದು ಅತಿ ಮುಖ್ಯ ಆಯಾಮ ವೆಂದರೆ ಆತನು ಬಿಂಬಿಸಿದ ಎರಡು ನಿರ್ದಿಷ್ಟ ಸಮಾಜಗಳು – ಒಂದು ಪರಿಪೂರ್ಣ ಶೀಲವಂತ, ಇನ್ನೊಂದು ನಿರ್ದಿಷ್ಟ ಪೂರ್ಣ ವಾಗಿ ದುಶ್ಶೀಲ – ಎಂದೇ ಆತನು, ತನ್ನ ಸಮಕಾಲೀನ ಹಿಂದೂ ಸಮಾಜದಲ್ಲಿ ಪ್ರಚಲಿತವಿದ್ದ ಜೀವನ ಮೌಲ್ಯಗಳನ್ನು ಧನಾತ್ಮಕ ಮತ್ತು ಋಣಾತ್ಮಕ ಕೋನಗಳಿಂದ ಬಿಂಬಿಸಿ, ವಿಶ್ಲೇಷಿಸುವುದರಲ್ಲಿ ಯಶಸ್ವಿಯಾಗುತ್ತಾನೆ. ಅಂದಿನ ಧರ್ಮಾನುಶಾಸನ ನಿರೂಪಿಸಿದ ಮನುವಿನಂತೆ ಅಂದಿನ ಕವಿಗಳೂ ತಮ್ಮ ಸಾಹಿತ್ಯಿಕ ಕಲೆಯನ್ನು ಹಿಂದೂ ಆದರ್ಶ ಸಮಾಜದ ನಿರ್ಮಾಣಕ್ಕೆ ಉಪಯುಕ್ತವಾಗಿರುವ ಒಂದು ಸಾಧನದಂತೆ ಬಳಸಲು ಬಯಸಿದರು. ಅಂದಿನ ಕವಿಗಳು ಎಲ್ಲಾ ಸ್ತರದ ಸಮಾಜ ಘಟಕಗಳಿಗೂ ಅನ್ವಯಿಸುವಂತೆ ಆದರ್ಶ ಮಾನವ ಅನುಶಾಸನದ ರೀತಿ ನಿಯಮಗಳನ್ನು ರೂಪಿಸುವಲ್ಲಿ ತಮ್ಮ ಕಲೆಯ ಪರಿಪೂರ್ಣ ಶಕ್ತಿಯನ್ನು ತೊಡಗಿಸಲು ಸಮರ್ಥ ವಾದ ಸೃಜನಾತ್ಮಕ ಸಮಾಜವಾದಿಗಳಾಗಿದ್ದರು. ವೇದಗಳು ಕೇವಲ ಸುಶಿಕ್ಷಿತರಿಗೆ ಲಭ್ಯವಾಗಿದ್ದರೆ ಮಹಾಕಾವ್ಯಗಳು ಲೋಕಭಾಷೆಯಲ್ಲಿ ಭಾಷಾಂತರಗೊಂಡು, ವಾಲ್ಮೀಕಿಯಷ್ಟೇ ಪ್ರಭಾವಿಗಳಾದ ತುಳಸೀ ದಾಸ ಮತ್ತು ಕಂಬನ್‌ರಂತಹ ಮೇಧಾವಿಗಳ ಪ್ರಯತ್ನ ಫಲವಾಗಿ, ಸುಶಿಕ್ಷಿತರನ್ನು ಮೀರಿ, ನಿರಕ್ಷರರೂ, ಮಹಿಳೆಯರೂ ಮತ್ತಿತರ ನಿಮ್ನವರ್ಗದ ಜನರೂ, ಅದನ್ನು ಕೇಳಿ, ಮನನ ಮಾಡಿ ಹಾಡಿಕೊಳ್ಳು ವಂತಾಯಿತು. ನಾಟಕಗಳು, ಜಾನಪದ ಹಾಡುಗಳು ಮತ್ತು ಚಿತ್ರ ಗಳ ಮೂಲಕ ಅವುಗಳನ್ನು ಕಂಠಗತ, ಕರಗತ ಮಾಡಿಕೊಂಡು ಅವು ಗಳ ಮೂಲಕ ಧರ್ಮ, ಆದರ್ಶಗಳ, ಮೌಲ್ಯಗಳ ಪ್ರಸಾರ ಮಾಡು ವಂತಾಯಿತಲ್ಲದೆ, ಅಂತಹ ಅಮೂಲ್ಯ ಆಸ್ತಿಯನ್ನು ಗಳಿಸಿ, ಉಳಿಸಿ, ಸಂರಕ್ಷಿಸುವಂತಾಯಿತು. ಇದರ ಫಲವಾಗಿ ಈಚೀಚಿನವರೆಗೆ, ಓರ್ವ ಹಿಂದೂ ಹುಡುಗ ಅಥವಾ ಹುಡುಗಿಗೆ ರಾಮಾಯಣದ ಕಥೆಯನ್ನು ಕೇಳಿದ ನಂತರ ತಾನೂ ಓರ್ವ ರಾಮ ಅಥವಾ ಸೀತೆಯಾಗಿ ಮೂಡಿ ಬರಬೇಕೆಂಬ ಹಂಬಲವಾದರೆ ಅದರಲ್ಲೇನೂ ಆಶ್ಚರ್ಯವಿಲ್ಲ.

**ರಾಮಾಯಣದಲ್ಲಿನ ಹೂರಣ :**

ವಾಲ್ಮೀಕಿಯು ಬಿಂಬಿಸುವ ಶಿಷ್ಟ ಪ್ರಭುತ್ವ ಸಮಾಜದಲ್ಲಿ ಸಾಮಾ ಜಿಕ ಅನುಶಾಸನದ ತೀವ್ರತೆ ಸಮಯಾನುಕ್ರಮವಾಗಿ ಅಧಿಕ ವಾಗುತ್ತಾ ಹೋಗುತ್ತದೆ. ಅತ್ಯಧಿಕ ಅಧಿಕಾರ ಸಾಮರ್ಥ್ಯ ಉಳ್ಳ ವರು, ಅತ್ಯಧಿಕ ಆತ್ಮ ನಿಗ್ರಹಕ್ಕೆ ಬದ್ಧರಾಗುತ್ತಾರೆ ಕಾರಣ ಒಂದು, ಅಧಿಕ ಶಕ್ತಿವಂತರು ಅಧಿಕ ತಾಳ್ಮೆಯನ್ನು ವಹಿಸಬೇಕು. ಕಾರಣ ಎರಡು, ಅಂತಹ ಅನುಶಾಸನವಿಲ್ಲದಿದ್ದರೆ ಎಂತಹ ಶಕ್ತಿಯೂ ಶೀಘ್ರವೇ ಪತನವಾಗುತ್ತದೆ. ಇದೇ ಕಾರಣಕ್ಕೆ ಕ್ಷತ್ರಿಯ ಸಮಾಜವು , ಅದರಲ್ಲೂ ಆಳುವವರಸರು, ಧರ್ಮರಕ್ಷಣೆಗೆ ಬದ್ಧರಾಗುತ್ತಾರೆ. ಅದ ಕ್ಕೆಂದೇ ಅವರು ಸಜ್ಜನರಾದ ಮಾನವ ಮತ್ತು ದೇವತೆಗಳನ್ನು ಅಪ್ರಚೋದಿತ ಹಿಂಸೆಯಿಂದ ರಕ್ಷಿಸುತ್ತಾರೆ ಮಾತ್ರವಲ್ಲ, ದುರ್ಜನ ರನ್ನು ರಾಕ್ಷಸರನ್ನು ನಿಷ್ಕರುಣೆಯಿಂದ ಶಿಕ್ಷಿಸುತ್ತಾರೆ; ನಿಗ್ರಹಿಸುತ್ತಾರೆ. ಇಷ್ಟೇ ಅಲ್ಲದೆ, ತಮ್ಮನ್ನು ಸನಾತನ ನ್ಯಾಯ ನೀತಿಯ ಕಟ್ಟುಪಾಡು ಗಳಿಗೆ ಒಪ್ಪಿಸಿಕೊಂಡು, ಇತರರಿಗೆ ಮೇಲ್ಪಂಕ್ತಿಯನ್ನು ಹಾಕಿಕೊಡು ತ್ತಾರೆ. ಸೀತೆಯ ಸತೀತ್ವದ ಬಗ್ಗೆ ತನಗೆ ಲವಲೇಶವಾದರೂ ಅನು ಮಾನವಿಲ್ಲದಿದ್ದರೂ, ಲೋಕಮತಕ್ಕೆ ಮಣಿದು ರಾಮನು ಸೀತೆ ಯನ್ನು ಎರಡು ಬಾರಿ ತ್ಯಜಿಸುತ್ತಾನೆ. ಇಲ್ಲಿ ಮೂಡಿ ಬಂದಿರುವ ರಾಮಾಯಣದ ಕಥೆಯು ಬಹ್ವಂಶ ಈಗಾಗಲೇ ಜನ ಜನಿತವಾಗಿ ರುವ ಕಥಾಹಂದರಕ್ಕೆ ಹೊಂದಿಕೊಂಡು ಹೋದರೂ, ಒಂದೆರಡು ಪ್ರಮುಖ ಘಟ್ಟದಲ್ಲಿ ಒದಗಿಸಲಾದ ವಿವರಗಳು ಓದುಗನನ್ನು ಅನಿರೀಕ್ಷಿತವಾಗಿ ತಟ್ಟದಿರಲಾರವು. ಉದಾಹರಣೆಗಾಗಿ, ಲಂಕೆಯ



ಯುದ್ಧದಲ್ಲಿ ಇಂದ್ರಜಿತು ತನ್ನ ಮಾಯಾವಿದ್ಯೆಯಿಂದಾಗಿ ರಾಮ ಲಕ್ಷ್ಮಣರನ್ನು ಸೋಲಿಸಿ, ಹೆಡೆಮುರಿ ಕಟ್ಟಿ, ಭೂಮಿಯಲ್ಲಿ ಕೆಡವುತ್ತಾನೆ. ರಾವಣನು ಸೀತೆಯನ್ನು ತನ್ನ ರಥದಲ್ಲಿ ಯುದ್ಧರಂಗಕ್ಕೆ ತಂದು ಮೂರ್ಛಿತರಾದ ರಾಮಲಕ್ಷ್ಮಣರನ್ನು ತೋರಿಸಿ ಮತ್ತೆ ಹಿಂತೆರಳುತ್ತಾನೆ. ಅಷ್ಟರಲ್ಲಿ ರಾಮನು ಎಚ್ಚೆತ್ತು ಲಕ್ಷ್ಮಣನ ಅವಸಾನವಾಯಿತೆಂದು ತಿಳಿದು ಮರುಗುತ್ತಾನೆ. ಆಗ ವಾನರ ನಾಯಕರಾದ ಸುಷೇಣ ದುಗ್ಧಸಾಗರದಲ್ಲಿ ಸಿಗುವ ಮಾಂತ್ರಿಕ ಔಷಧದ ಬೇರೊಂದನ್ನು ತಂದರೆ ಸತ್ತವರೂ ಬದುಕುತ್ತಾರೆ ಮತ್ತು ಅದಕ್ಕಾಗಿ ವಾಯುಪುತ್ರನು ಅದನ್ನು ತರಲು ಶೀಘ್ರವಾಗಿ ತೆರಳುವಂತೆ ಸೂಚಿಸುತ್ತಾರೆ. ಆದರೆ ಅಷ್ಟರಲ್ಲಿ ಗರುಡ ದೇವನ ಆಗಮನವಾಗುತ್ತದೆ. ಉರಿಯುವ ಜ್ವಾಲೆಯಂತಹ ರಭಸದಿಂದ ಆತನು ಪ್ರತ್ಯಕ್ಷ ನಾಗುತ್ತಾನೆ ಸಹೋದರರ ಮೈಯಲ್ಲಿ ದಟ್ಟವಾಗಿ ನೆಟ್ಟ ಸಹಸ್ರಾರು ಬಾಣಗಳು, ಭೀತರಾದ ಮರಿಹಾವುಗಳಂತೆ ಓಡಿ ಮಾಯವಾಗುತ್ತವೆ. ಇಲ್ಲಿ ಸಾಮಾನ್ಯವಾಗಿ ಜನರು ನಂಬಿ ಬಂದ ಸಂಜೀವಿನಿ ಮೂಲಿಕೆಯ ಪ್ರಸ್ತಾವವೇ ಇಲ್ಲ.

ಇಲ್ಲಿ ಸಂಜೀವಿನಿ ಮಂತ್ರದ ಪ್ರಸಂಗ ಬರುವುದು ಬಹಳ ನಂತರ. ಮುಂದುವರಿದ ಭೀಕರ ಯುದ್ಧದಲ್ಲಿ ಇಂದ್ರಜಿತು ತನ್ನ ಮಾಯಾಸ್ತ್ರಗಳಿಂದ ರಾಮನ ಸೇನೆಯನ್ನು ನಿರ್ದಯವಾಗಿ ಸದೆಬಡಿಯುತ್ತಾನೆ. ಸುಗ್ರೀವ, ಅಂಗದ, ಜಾಂಬವಾನ್, ನೀಲಾದಿ ಅಸಂಖ್ಯಾತ ರಾಮಸೈನ್ಯ ಧರಾಶಾಯಿಯಾಗುತ್ತದೆ. ಈ ಸಂದಿಗ್ಧ ಸ್ಥಿತಿಯಲ್ಲಿ ರಾಮನು ಸೋಲನ್ನೊಪ್ಪಿಕೊಂಡಂತೆ ನಟಿಸುತ್ತಾನೆ. ಆಗ ಶೋಚನೀಯ ಅವಸ್ಥೆಯಲ್ಲಿ ನರಳುತ್ತಿದ್ದ ಜಾಂಬವಂತನು ಹನುಮಂತನನ್ನು ಬಳಿ ಕರೆದು ಕ್ಷೀಣಸ್ವರದಲ್ಲಿ ಅವನಿಗೆ ''ವಾನರ ಮತ್ತು ಭಲ್ಲೂಕ ಸೇನೆಯನ್ನು ಉಳಿಸುವ ಸಲುವಾಗಿ ನೀನು ನಗಾಧಿರಾಜ ಹಿಮಾಲಯವನ್ನು ಸೇರಿ ಅಲ್ಲಿಂದ ಜೀವದಾಯಿಕ ಗಿಡಮೂಲಿಕೆಗಳನ್ನು ತಂದು ಉಪಕರಿಸು'' ಎಂದು ಆದೇಶಿಸುತ್ತಾನೆ. ಆ ಮೇರೆಗೆ ಹನುಮಂತನು ಹಿಮಾಲಯವನ್ನು ಸೇರಿ, ಅಲ್ಲಿಂದ ತರಾತುರಿಯಲ್ಲಿ ಪರ್ವತದ ಭಾಗವನ್ನೇ ಕಿತ್ತುತಂದು, ಹತರಾದ ಮತ್ತು ಘಾಸಿಗೊಂಡ ರಾಮಸೇನೆಯನ್ನು ಉಪಚರಿಸಿ, ಕದನಬದ್ಧರನ್ನಾಗಿ ಮಾಡಿದ ಪ್ರಸಂಗ ಮರುಕಳಿಸುತ್ತದೆ; ಅದು ಕದನದ ಅಂತಿಮ ಘಟ್ಟದಲ್ಲಿ. ವಿಭೀಷಣನ ವಿಶ್ವಾಸಘಾತದಿಂದ ಕುಪಿತನಾದ ರಾವಣನು ಭಯಂಕರ ರುದ್ರಾಸ್ತ್ರವನ್ನು ವಿಭೀಷಣನ ಮೇಲೆ ಪ್ರಯೋಗಿಸಲು ಉದ್ಯುಕ್ತನಾದಾಗ ಲಕ್ಷ್ಮಣನು ವಿಭೀಷಣನ ಎದುರು ನಿಂತು ರುದ್ರಾಸ್ತ್ರವನ್ನು ತನ್ನ ಎದೆಯ ಮೇಲೆ ಸ್ವೀಕರಿಸಿ ಧರಾಶಾಯಿಯಾಗುತ್ತಾನೆ. ಆಗ ಮತ್ತೊಮ್ಮೆ ಹನುಮಂತನು ಹಿಮಾಲಯಕ್ಕೆ ನೆಗೆದು ತಂದುಕೊಟ್ಟ ಸಂಜೀವಿನಿ ಮೂಲಿಕೆಯನ್ನು ಉಪಯೋಗಿಸಿ ಲಕ್ಷ್ಮಣನನ್ನು ಉಪಚರಿಸಿದ ಮೇಲೆ ಯುದ್ಧವು ಮುಂದುವರಿದು, ರಾಮನು ದಣಿದು ನಿಂತಾಗ, ಅಗಸ್ತ್ಯ ಮಹರ್ಷಿಯು ಅಲ್ಲಿಗೆ ಬಂದು ಎಲ್ಲಾ ಶಕ್ತಿಯ ಮೂಲನಾದ ಸೂರ್ಯದೇವನನ್ನು ಪ್ರಾರ್ಥಿಸುವಂತೆ ಸಲಹೆ ನೀಡಿ ಆದಿತ್ಯ ಹೃದಯವನ್ನು ಬೋಧಿಸುತ್ತಾರೆ. ರಾವಣನ ವಧೆಯಾಗುತ್ತದೆ. ಉಳಿದೆಲ್ಲಾ ಕಥಾಭಾಗ ವಾಲ್ಮೀಕಿಯ ಕಥೆಯನ್ನು ಹೆಚ್ಚು ಕಡಿಮೆ ಅನುಸರಿಸುತ್ತದೆ.

ಕಥಾನಕದ ಅಂತ್ಯದ ಸ್ವಾರಸ್ಯದ ಅಂಶವೆಂದರೆ ರಾಮನ ಕೊನೆಯ ದಿನಗಳ ವರ್ಣನೆ. ರಾಮಾವತಾರದ ಮುಖ್ಯ ಉದ್ದೇಶವಾದ ದುಷ್ಟಶಿಕ್ಷೆ, ಶಿಷ್ಟ ರಕ್ಷೆಯ ಮಹತ್ಕಾರ್ಯ ಮುಗಿದುದರಿಂದ ಈಗ ರಾಮನ ನಿರ್ಗಮನದ ಕಾಲ ಸಮೀಪಿಸಿದೆ. ಇಷ್ಟರಲ್ಲಿ, ಮಹಾನಾರಾಯಣನು ಮಾಯೆಯಲ್ಲಿ ಪಡೆದ ಕಾಲನು ಪ್ರತ್ಯಕ್ಷನಾಗಿ ರಾಮನಿಗೆ ಅವನ ಅವತಾರದ ವ್ಯಾಪ್ತಿಯನ್ನು ವಿವರಿಸಿ, ಅವನು (ರಾಮನು) ಇನ್ನು ದೀರ್ಘಕಾಲ ರಾಜ್ಯವಾಳಲು ಬಯಸುತ್ತಾನೋ ಅಥವಾ ದೇವಲೋಕಕ್ಕೆ ಮರಳಲು ಇಚ್ಛಿಸುತ್ತಾನೋ ಎಂದು ಕೇಳುತ್ತಾನೆ. ರಾಮನಿಗೀಗ ದೇವಲೋಕಕ್ಕೆ ಹಿಂತಿರುಗುವ ಇಚ್ಛೆ. ಎಲ್ಲರನ್ನೂ ಹರಸಿ ಹನುಮಂತನಿಗೆ ಚಿರಂಜೀವಿತ್ವವನ್ನು ಕರುಣಿಸಿ, ಲೋಕದಿಂದ ನಿರ್ಗಮಿಸಲು ಉದ್ಯುಕ್ತನಾಗುತ್ತಾನೆ. ಮರುದಿನ ವಸಿಷ್ಠನು ಎಲ್ಲಾ ಮೃತರಿಗೆ ಅಪರಕರ್ಮವನ್ನು ಮಾಡಿಸಿ, ರಾಮನು ತನ್ನ ಕುಟುಂಬದ ಉಳಿದ ಸದಸ್ಯರು ಮತ್ತು ಎಲ್ಲಾ ಚರಾಚರ ಜೀವಜೀವಿಗಳೊಂದಿಗೆ ಸರಯೂ ನದಿಯ ತೀರವನ್ನು ತಲಪುತ್ತಾನೆ. ಆಗ ಅಲ್ಲಿ ಮಹಾಪಿತನಾದ ಬ್ರಹ್ಮನು ದೇವದೇವಾದಿಗಳೊಂದಿಗೆ ಬಂದಿಳಿದು ರಾಮರೂಪಿ ಮಹಾವಿಷ್ಣುವನ್ನು ಸ್ವಾಗತಿಸಲು ಉದ್ಯುಕ್ತನಾದಾಗ, ಅಲ್ಲಿ ನೆರೆದ ಎಲ್ಲರೂ ತಮ್ಮ ದೇವರೂಪವನ್ನು ಪಡೆದು ಸರಯೂ ನದಿಯನ್ನು ಹೊಕ್ಕು, ಜಲಸಮಾಧಿಯನ್ನು ಹೊಂದಿ ದೇವಲೋಕವನ್ನು ಸೇರುತ್ತಾರೆ.

## ಮಹಾಭಾರತ :

ಮಹಾಭಾರತವು, ನಿರ್ವಿವಾದವಾಗಿ ಭಾರತದ ಅತಿ ಮುಖ್ಯ ರಾಷ್ಟ್ರೀಯ ವೀರಕಾವ್ಯ. ಇಲಿಯೆಡ್ ಮಹಾಕಾವ್ಯವು ಹೇಗೆ ಗ್ರೀಸಿನ ಹಳ್ಳಿ ಹಳ್ಳಿಗೂ ಮನೆಮನೆಗೂ ಮಾನ್ಯ ಗ್ರಂಥವಾಯಿತೋ ಹಾಗೆಯೇ ಮಹಾಭಾರತವು ಭಾರತದ ಹಳ್ಳಿಹಳ್ಳಿಯಲ್ಲೂ, ಮನೆಮನೆಯಲ್ಲೂ ಇಂದಿಗೂ ಮಾನ್ಯಗ್ರಂಥ. ಅದು ಎಲ್ಲಾ ಪವಿತ್ರಗ್ರಂಥಗಳಿಗಿಂತಲೂ ಅಧಿಕ ಜನಮಾನ್ಯ. ಅದರಲ್ಲಿ ಭಾರತದ ರಾಷ್ಟ್ರೀಯ ವೇದವಾಕ್ಯವಾದ ಶ್ರೀಮದ್‌ಭಗವದ್ಗೀತೆಯೂ ಅಡಕವಾಗಿದೆ. ಒಂದು ಗತಕಾಲದ ಸಂಭಾವ್ಯ ವೀರಗಾಥೆಯೂ, ಜನಪದಕಾವ್ಯವೂ ಆಗಿರುವ ಈ ಗ್ರಂಥದ ಅಡಿಗಲ್ಲು ಕೃಷ್ಣಾವತಾರದ ಕಥೆಯೂ ಹೌದು. ಕುರುವಂಶದ ಧೃತರಾಷ್ಟ್ರ ಮತ್ತು ಪಾಂಡು ಸಹೋದರರ ಸಂತಾನವಾದ ಕೌರವರು ಮತ್ತು ಪಾಂಡವರ ನಡುವಿನ ಸೋದರ ಕಲಹ ಇದರ ಕೇಂದ್ರ ಕಥಾವಸ್ತು. ಹಲವಾರು ಪ್ರಾಚೀನ ಗ್ರಂಥಗಳ ಮಾದರಿಯಲ್ಲಿ ನೂರಾರು ಚಿಕ್ಕಪುಟ್ಟ ಉಪಕಥೆಗಳೂ ಅಲ್ಲಲ್ಲಿ ಇಣುಕುಹಾಕಿ ಈ ಮಹಾಗ್ರಂಥದ ಮೆರುಗನ್ನು ಹೆಚ್ಚಿಸಿ ಮೊದಲಿನಿಂದ ಕೊನೆಯ ಅಕ್ಷರದತನಕ, ಅದರ ಕಥನದ ಓಟವನ್ನು ಚುರುಕಾಗಿಸಿಯೂ, ಹೃದಯಂಗಮವಾಗಿಯೂ ಮಾಡಿದೆ. ಇಡೀ ಗ್ರಂಥವು ಶ್ರೀಮಂತ ಕಲ್ಪನೆಗಳಿಂದಲೂ, ಅತ್ಯದ್ಭುತ ಚಿತ್ರಣಗಳಿಂದಲೂ ಚೇತೋಹಾರಿಯಾಗಿ ರೂಪುಗೊಂಡಿದೆ. ಅಲ್ಲದೆ, ಇದು ಬಹಳ ಪುರಾತನ ಕೃತಿಯೆಂದು ಅರಿವಿರುವ ನಮಗೆಲ್ಲ ಇದರಲ್ಲಿನ ವ್ಯಕ್ತಿಗಳು, ಶಕ್ತಿಗಳು, ಯುಕ್ತಿಗಳು, ಘಟನೆಗಳು, ಆಲೋಚನೆಗಳು, ವಿಚಾರಸರಣಿಗಳು, ಪ್ರಬುದ್ಧತೆ ವೈಪರೀತ್ಯಗಳು, ವ್ಯಕ್ತಿ

ವ್ಯಕ್ತಿಗಳ ಮತ್ತು ಮೌಲ್ಯ ಮೌಲ್ಯಗಳ ನಡುವಿನ ಘರ್ಷಣೆಗಳು, ರಾಜಕೀಯ, ಸಾಮಾಜಿಕ ದಾಳಗಳು ಇವುಗಳು ಇಂದಿಗೂ ಎಷ್ಟು ಸಂಗತ ಮತ್ತು ಸಂಭಾವ್ಯಗಳಾಗಿರುವವೆಂದು ಕಂಡಾಗ ಒಂದು ರೀತಿಯಲ್ಲಿ ಆಶ್ಚರ್ಯ ಮತ್ತು ಇನ್ನೊಂದು ರೀತಿಯಲ್ಲಿ ನಮ್ಮ ಪೂರ್ವಜರ ಬಗೆಗೆ ಗೌರವ ಮತ್ತು ಅಭಿಮಾನ ಹುಟ್ಟದೆ ಇರದು. ಇದಕ್ಕೂ ಹೆಚ್ಚಾಗಿ, ಅಲ್ಲೊಂದು ಇಲ್ಲೊಂದು ವ್ಯತಿಕ್ರಮದ ಕಟ್ಟು ಕಟ್ಟಳೆ ಅಥವಾ ವಿಲಕ್ಷಣವೆನ್ನಬಹುದಾದ ನಂಬಿಕೆಗಳು ನಮ್ಮ ಬುದ್ಧಿಗೆ ಸವಾಲೆಸೆಯುವಂತೆ ಕಂಡರೂ, ಪಾತ್ರ ಚಿತ್ರಣದ ಲಾಲಿತ್ಯ, ವ್ಯಕ್ತಿವಿಶೇಷಗಳ ವರ್ತನಾ ವಿನ್ಯಾಸಗಳು, ಸಾಮಾಜಿಕ ಜೀವನದ ಬೆಳಕು ಕತ್ತಲೆಯ ಆಟಗಳು, ಇವುಗಳನ್ನು ಆಸ್ವಾದಿಸುತ್ತಿರುವಾಗ – ಅಲ್ಲಿ ಆ ಕ್ಷಣದಲ್ಲಿ ಆಧುನಿಕ ಐರೋಪ್ಯ ಕಾದಂಬರಿಗಳ ಮತ್ತು ನಾಟಕಗಳ ಚಿತ್ರಣಗಳಲ್ಲಿ ಆಗುವಂತೆ ನಮ್ಮನ್ನೇ ನಾವು ಗುರುತಿಸಿಕೊಳ್ಳುವ ಅನುಭವವಂತೂ ಆಗುತ್ತದೆ. ತಾಯಿಯು ತನ್ನನ್ನು ತಬ್ಬಿಕೊಳ್ಳುವಾಗ ಕರ್ಣನ ಮನೋಸ್ಥೈರ್ಯ, ತನ್ನ ಒಳದನಿಗೆ ಸಮಜಾಯಿಸುವಂತೆ, *ಕುಂಜರ* ಶಬ್ದವನ್ನು ಮೆಲುದನಿಯಲ್ಲಿ ಹೇಳುವ ಯುಧಿಷ್ಠಿರನ ಆತ್ಮವಂಚನೆ, ರಣರಂಗದಲ್ಲೇ ಭೀಷ್ಮನು ಶಿಖಂಡಿಯೊಡನೆ ಹೋರಾಡಬೇಕಾಗಿ ಬಂದಾಗ ಆತನು ಬೀರಿದ ಅರ್ಥಗರ್ಭಿತ ನಗು, ಇಂತಹ ಸನ್ನಿವೇಶಗಳು ಓದುಗನಿಗೆ ಮುದಕೊಡುತ್ತವೆ.

ಆದರೆ, ಎಲ್ಲಕ್ಕೂ ಮೀರಿ, ಆದಿಯಿಂದ ಅಂತ್ಯದವರೆಗೆ ಓದುಗನ, ಕೇಳುಗನ ಆಸಕ್ತಿಯನ್ನು ಹಿಡಿದಿಡುವುದು ಅದರಲ್ಲಿನ ಪಾತ್ರ



ಗೀತೋಪದೇಶ (ಸುರೇಂದ್ರನಾಥ ಕರ್ ಚಿತ್ರ)

ಸೃಷ್ಟಿಯ ಕೌಶಲ್ಯ. ಚಿಪ್ಪಿನ ಮೀನು ತನ್ನ ಸುತ್ತ ತಾನೇ ಚಿಪ್ಪನ್ನು ನಿರ್ಮಿಸಿಕೊಳ್ಳುವಂತೆ, ಇಲ್ಲಿಯ ಪ್ರತಿಯೊಂದು ಪಾತ್ರವೂ ತನ್ನ ಜೀವನ ಮತ್ತು ಭವಿಷ್ಯವನ್ನು ತಾನೇ ರೂಪಿಸಿಕೊಳ್ಳಲು ಕಾರಣವಾಗುವುದು ನಮ್ಮ ಗಮನಕ್ಕೆ ಬಾರದಿರದು. ಭಾರತದೇಶದ ಇಡೀ ಸಾಮಾಜಿಕ ವ್ಯವಸ್ಥೆಯ ಶಾಸ್ತ್ರದರ್ಶನವು, ನಮ್ಮ ಜನಜೀವನದ ಎಲ್ಲಾ ಪರಿಸ್ಥಿತಿಗಳಲ್ಲೂ ಹಾಸುಹೊಕ್ಕಾಗಿರುವಂತೆ, ಇಲ್ಲಿಯೂ ಪಾತ್ರಗಳನ್ನು ಗುಣಗಳಿಂದ ಪ್ರತ್ಯೇಕಿಸಲಾಗದಂತೆ ಹೆಣೆಯಲಾಗಿದೆ. ಇಂದಿನ, ಮತ್ತು ಮುಂಬರುವ ಎಲ್ಲಾ ತಲೆಮಾರುಗಳ ಹೃದಯ ಮತ್ತು ಬುದ್ಧಿಗಳಿಗೆ ಒಂದು ಅಪ್ರತಿಮ ಸಂದೇಶವನ್ನು ತಲುಪಿಸುವ ಕಾರ್ಯವನ್ನು ಈ ಮಹಾಕಾವ್ಯವು ಮಾಡಲು ಯತ್ನಿಸುತ್ತದೆ ಮತ್ತು ಆ ಯತ್ನದಲ್ಲಿ ಅಪ್ರತಿಮ ಯಶಸ್ಸನ್ನು ಕಾಣುತ್ತದೆ ಎಂಬುದು ವಿವಾದಾತೀತ. ರಾಷ್ಟ್ರದ ಸಂಪ್ರದಾಯಗಳಿಗಿಂತಲೂ ಅದು ರಾಷ್ಟ್ರದ ಮೌಲ್ಯಗಳನ್ನು ಕ್ರೋಡೀಕರಿಸಿ ಅವುಗಳನ್ನು ನಮಗೆ ಅತಿ ಸಹಜವಾಗಿ ಪ್ರದಾನಿಸುತ್ತದೆ. ಇದುವೇ ಎಲ್ಲದರಲ್ಲೂ ಸೌಂದರ್ಯವನ್ನು ಅರಸುವ ಗ್ರೀಕ್ ಮಹಾಕಾವ್ಯಗಳಿಗೂ, ಮೌಲ್ಯಗಳನ್ನರಸುವ ಭಾರತೀಯ ಮಹಾಕಾವ್ಯಗಳಿಗೂ ಇರುವ ಬಹು ಮುಖ್ಯವಾದ ಅಂತರ.

ಇಲ್ಲಿ ಮಹಾಭಾರತದ ಕಥಾನಕ ರಾಜಕುವರರ ಧನುರ್ವಿದ್ಯೆಯಿಂದ ತೊಡಗುತ್ತದೆ. ಅರ್ಜುನನನ್ನು ಜಗತ್ತಿನಲ್ಲಿಯೇ ಏಕಮೇವಾದ್ವಿತೀಯ ಧನುರ್ವಿದ್ಯಾ ಪ್ರವೀಣನನ್ನಾಗಿ ಮಾಡುವಂತೆ ದ್ರೋಣನು ಕೊಡುವ ಭಾಷೆ, ಏಕಲವ್ಯನ ಕಥೆ, ಲಾಕ್ಷಾಗೃಹದಹನ, ಪಾಂಚಾಲಿಯ ಪಾಣಿಗ್ರಹಣ ಇತ್ಯಾದಿ ಒಂದನ್ನೊಂದು ಹಿಂಬಾಲಿಸಿ ಬರುತ್ತವೆ. ರಾಜಸೂಯ ಯಾಗದ ಸಂದರ್ಭದಲ್ಲಿ ಕೃಷ್ಣನಿಗೆ ಅಗ್ರಪೀಠ ಕೊಡುವ ಮಾತು ಬಂದಾಗ ಶಿಶುಪಾಲನ ಪ್ರವೇಶವಾಗುತ್ತದೆ. ಶಿಶುಪಾಲನು ಕೃಷ್ಣನನ್ನು ನೂರುಬಾರಿ ನಿಂದಿಸಿದಾಗ ಕೆರಳಿದ ಭೀಮನಿಗೆ ಭೀಷ್ಮನು ಶಿಶುಪಾಲನ ಜನ್ಮವೃತ್ತಾಂತವನ್ನು ಸ್ವಾರಸ್ಯವಾಗಿ ವಿವರಿಸುತ್ತಾನೆ: ಶಿಶುಪಾಲನು ಚೇದಿ ರಾಜವಂಶದಲ್ಲಿ ಹುಟ್ಟಿದಾಗ ಆತನಿಗೆ ಮೂರು ಕಣ್ಣುಗಳೂ, ನಾಲ್ಕು ಕೈಗಳೂ ಇದ್ದು ಆತನು ಗಾರ್ದಭದಂತೆ ಅರಚುತ್ತಿದ್ದನು. ಈ ನೋಟದಿಂದ ಭೀತರಾದ ಅವನ ಹೆತ್ತವರು ಅವನನ್ನು ತ್ಯಜಿಸಲು ಉದ್ಯುಕ್ತರಾದಾಗ – ''ಹಾಗೆ ಮಾಡಬೇಡಿ, ಅವನನ್ನು ಲಾಲಿಸಿ, ಪಾಲಿಸಿರಿ. ಆತನು ಬಲು ಅದೃಷ್ಟವಂತನು, ಬಹಳ ಉನ್ನತ ಪದವಿಯನ್ನು ಹೊಂದುವವನೂ ಆಗುತ್ತಾನೆ'' ಎಂದು ಅಶರೀರವಾಣಿಯಾಗುತ್ತದೆ. ಚಕಿತರಾದ ಶಿಶುಪಾಲನ ಹೆತ್ತವರು, ''ಅವನನ್ನು ವಧಿಸುವ ಹಂತಕನು ಯಾರು?'' ಎಂದು ಕೇಳಿದಾಗ ಯಾರ ತೊಡೆಯ ಮೇಲೆ ಆತನು ಕುಳಿತಾಗ ಆತನ ಮೂರನೆಯ ಕಣ್ಣು ಮತ್ತು ಅತಿರಿಕ್ತ ಎರಡು ಕೈಗಳು ತಂತಾನೇ ಮಾಯವಾಗುತ್ತವೋ ಅವನೇ ಈತನನ್ನು ವಧಿಸುತ್ತಾನೆ ಎಂಬ ಮಾರ್ದನಿಯಾಗುತ್ತದೆ. ಯಾರ್‍ಯಾರು ಆತನನ್ನು ತೊಡೆಯಲ್ಲಿ ಕೂರಿಸಿಕೊಂಡರೂ ಆತನ ಮೂರನೆ ಕಣ್ಣು ಮತ್ತು ಅತಿರಿಕ್ತವಾದ ಎರಡು ಕೈಗಳು ಬಿದ್ದುಹೋಗುವುದಿಲ್ಲ. ಆದರೆ ಒಂದು ದಿನ ರಾಜಕುಮಾರ ಕೃಷ್ಣನು ಅವರ ಅರಮನೆಗೆ ಬಂದು ಶಿಶುಪಾಲನನ್ನು ತನ್ನ ತೊಡೆಯಮೇಲೆ ಕೂರಿಸಿ ಕೊಂಡಾಗ ಆಕಾಶವಾಣಿಯ ಭವಿಷ್ಯ ನಿಜವಾಗುತ್ತದೆ. ಆಗ ಶಿಶುಪಾಲನ ತಾಯಿಯು

ಕೃಷ್ಣನನ್ನು ಸಮೀಪಿಸಿ, ''ಯಾವಾಗಲಾದರೂ ನನ್ನ ಮಗನು ನಿನ್ನನ್ನು ನಿಂದಿಸಿದರೆ ಅವನನ್ನು ಕ್ಷಮಿಸು'' ಎಂದು ಬೇಡಿಕೊಳ್ಳುತ್ತಾಳೆ. ದಯಾಳುವಾದ ಕೃಷ್ಣನು ಆಗ, ''ಒಮ್ಮೆ ಏಕೆ, ಆತನು ನೂರು ಬಾರಿ ನನ್ನನ್ನು ನಿಂದಿಸಿದರೂ ನಾನು ಆತನನ್ನು ಕ್ಷಮಿಸುತ್ತೇನೆ'' ಎಂದು ಮಾತು ಕೊಡುತ್ತಾನೆ. ಅದುದರಿಂದಲೇ ಶಿಶುಪಾಲನು ನೂರೊಂದು ಬಾರಿ ತನ್ನನ್ನು ನಿಂದಿಸುವವರೆಗೂ ಕೃಷ್ಣನು ಶಾಂತನಾಗಿದ್ದು ನಂತರ ಒಮ್ಮೆಲೇ, ''ನಿನ್ನ ಪಾಪದ ಕೊಡ ಇದೀಗ ತುಂಬಿತು'' ಎಂದು ಉದ್ಗರಿಸಿ, ತನ್ನ ಸುದರ್ಶನ ಚಕ್ರದಿಂದ ಶಿಶುಪಾಲನನ್ನು ಪ್ರಹರಿಸಿ ಆತನನ್ನು ಮುಡಿಯಿಂದ ಅಡಿಯವರೆಗೆ ಇಬ್ಭಾಗವಾಗಿ ಸೀಳುತ್ತಾನೆ.

ನಂತರ ಅನುಕ್ರಮವಾಗಿ ಬರುವ ದ್ಯೂತದ ಕಥೆ ತುಂಬಾ ಸ್ವಾರಸ್ಯವಾಗಿದೆ. ಶಕುನಿಯು ಒಡ್ಡಿದ ಕುಟಿಲ ದ್ಯೂತದಲ್ಲಿ ಸೋತ ಯುಧಿಷ್ಠಿರನು ಕ್ರಮವಾಗಿ ತನ್ನ ತಮ್ಮಂದಿರನ್ನೂ ಕೊನೆಯಲ್ಲಿ ಪಾಂಚಾಲಿಯನ್ನೂ ಪಣವಾಗಿಟ್ಟು ಸೋಲುತ್ತಾನೆ. ಗೆದ್ದ ದುರ್ಯೋಧನನು ಮದೋನ್ಮತ್ತನಾಗಿ ದ್ರೌಪದಿಯನ್ನು ಬಂಧಿಸಲು ಉದ್ಯುಕ್ತನಾದಾಗ ಆಕೆ ಒಂದೇ ಒಂದು ಪ್ರಶ್ನೆಯನ್ನು ಕೇಳುತ್ತಾಳೆ, ''ನನ್ನನ್ನು ಪಣಕ್ಕಿಟ್ಟಾಗ ಯುಧಿಷ್ಠಿರನು ಯಾವ ಸ್ಥಿತಿಯಲ್ಲಿದ್ದನು?'' ''ಯುಧಿಷ್ಠಿರನು ಮೊದಲು ತನ್ನನ್ನು ಪಣಕ್ಕಿಟ್ಟು ಸೋತ ಮೇಲೆ ಆಕೆಯನ್ನು ಪಣವಾಗಿಟ್ಟ'' ಎಂಬ ಉತ್ತರ ಸಿಕ್ಕಿದಾಗ ಆಕೆ, ''ಅದು ಹೇಗೆ ಒಬ್ಬ ಸೋತು, ಗೆದ್ದವನ ಗುಲಾಮನಾದ ನಂತರ, ಅವನು ಆ ವೇಳೆಯಲ್ಲಿ ಸ್ವತಂತ್ರವಾಗಿದ್ದ ಇತರ ವ್ಯಕ್ತಿಗಳನ್ನು ಪಣಕ್ಕಿಡುವ ಅಧಿಕಾರವನ್ನು ಪಡೆಯುತ್ತಾನೆ?'' ಎಂದು ಕೇಳಿದಾಗ ಅಲ್ಲಿ ನೆರೆದಿರುವವರೆಲ್ಲರೂ ಆಕೆಯ ಮಾತಿನ ಹಿಂದಿರುವ ಸತ್ಯವನ್ನು ಎತ್ತಿ ಹಿಡಿಯುತ್ತಾರೆ. ಈ ಬೆಳವಣಿಗೆಯಿಂದ ಚಕಿತನಾದ ಧೃತರಾಷ್ಟ್ರನು, ''ಮಗಳೇ, ನೀನು ಕೇಳಿದ ವರವನ್ನು ನಿನಗೆ ಕೊಡುತ್ತೇನೆ'' ಎಂದು ಹೇಳಿದಾಗ ಆಕೆ ''ಹಾಗಾದರೆ, ನನ್ನ ಪತಿಗಳೆಲ್ಲರ ಸ್ವಾತಂತ್ರ್ಯವನ್ನು ಮರಳಿಸು'' ಎಂದು ಕೇಳುತ್ತಾಳೆ. ''ಇನ್ನೇನಾದರೂ ಕೇಳು'' ಎಂದು ಧೃತರಾಷ್ಟ್ರನು ಒತ್ತಾಯಿಸಿದಾಗ ಆಕೆ, ''ನನ್ನ ಪತಿಗಳು ಪ್ರಪಂಚವನ್ನೇ ಗೆಲ್ಲಬಲ್ಲರು, ನನಗಿನ್ನೇನೂ ಬೇಡ'' ಎಂದು ಧೀರಳಾಗಿ ನುಡಿಯುತ್ತಾಳೆ. ಅಲ್ಲಿಯೇ ಕುಳಿತಿದ್ದ ಕರ್ಣನು ''ವ್ಹಾ, ಎಂತಹ ಧೀರ ಮತ್ತು ಚಾಣಾಕ್ಷ ಮಹಿಳೆ! ನಿರಾಸೆಯ ಮಡುವಿನಲ್ಲಿ ಮುಳುಗಿ ಸಾಯುತ್ತಿದ್ದ ಪಾಂಡವರನ್ನು ಈ ಪಾಂಚಾಲದ ರಾಜಕುವರಿ ನಾವೆಯಂತೆ ಬಂದು ರಕ್ಷಿಸಿ ದಡ ಮುಟ್ಟಿಸಿದಳಲ್ಲ!'' ಎಂದು ಅಚ್ಚರಿಯಿಂದ ಬೆಟ್ಟುಕಚ್ಚುತ್ತಾನೆ. ಆದರೂ ವಿಧಿ ಬರೆದಂತೆ ಎರಡನೇ ಬಾರಿ ದ್ಯೂತದ ಪಂಥಾಹ್ವಾನವನ್ನು ಒಪ್ಪಿಕೊಂಡ ಯುಧಿಷ್ಠಿರನು ಮತ್ತೊಮ್ಮೆ ಎಲ್ಲವನ್ನೂ ಕಳೆದುಕೊಂಡು ಹನ್ನೆರಡು ವರ್ಷ ವನವಾಸ ಮತ್ತು ಒಂದು ವರ್ಷ ಅಜ್ಞಾತವಾಸಕ್ಕೆ ಗುರಿಯಾಗುತ್ತಾನೆ ಎಂಬುದು ವಿಷಾದದ ಸಂಗತಿ. ಮಹಾಯುದ್ಧದ ಸಂದಿಗ್ಧತೆಯ ನಡುವೆ ಸತ್ಯನಿಷ್ಠೆಗೆ ಹೆಸರಾಗಿದ್ದ ಯುಧಿಷ್ಠಿರನು ದ್ರೋಣನನ್ನು ಯುದ್ಧದಿಂದ ವಿಮುಖನನ್ನಾಗಿ ಮಾಡಲು ''ಅಶ್ವತ್ಥಾಮವೆಂಬ ಆನೆಯು ಹತವಾಯಿತು'' ಎಂದು ಮೆಲುದನಿಯಲ್ಲಿ ಹೇಳಿದುದು ಒಂದು ರೀತಿಯ ದುರಂತವೇ ಸರಿ.

ಈ ಯುದ್ಧದ ರಂಗದಲ್ಲೇ ಶ್ರೀಮತ್ ಭಗವದ್ಗೀತೆ ಹುಟ್ಟುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಗೀತೆಯ ಶ್ರೇಷ್ಠತೆಗೆ ಸಮನಾದ ಇನ್ನಾವ ಗ್ರಂಥವೂ ಇಲ್ಲ. ಮಾನವ ಇತಿಹಾಸದಲ್ಲಿ – ಅಷ್ಟೇ ಏಕೆ ಇತರ ಯಾವ ಮತ ಧರ್ಮಗ್ರಂಥವೂ – ಇಂತಹ ಮಾನವೀಯ, ಸಾಮಾಜಿಕ ಮತ್ತು ಆಧ್ಯಾತ್ಮಿಕ ವಿಚಾರಧಾರೆಯನ್ನು ಇಷ್ಟು ಸುಲಲಿತವಾಗಿ, ನಿರ್ದಿಷ್ಟವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ಪ್ರಸರಿಸುವಲ್ಲಿ ಯಶಸ್ವಿಯಾಗಿಲ್ಲ.

ಮತ್ತೆ ನಮ್ಮ ಮನಸೆಳೆಯುವ ಹಲವಾರು ಚುಟುಕು ಕಥಾನಕಗಳು ಸಾಲಾಗಿ ಒಂದರ ಹಿಂದೆ ಇನ್ನೊಂದರಂತೆ ಬರುತ್ತವೆ. ಆದರೆ ಇವುಗಳೆಲ್ಲದರ ನಡುವೆ ನಮಗೆ ಒಂದು ಅಮೂಲ್ಯ ಪಾಠ ಕಲಿಸುವ ಕಥಾಭಾಗ ಪಾಂಡವರ ಸ್ವರ್ಗಾರೋಹಣ. ಇದರ ಮೊದಲು, ಶ್ರೀ ವ್ಯಾಸ ಮಹರ್ಷಿಯ ಕೃಪೆಯಿಂದ, ಎರಡೂ ಸೈನ್ಯ ವಿಭಾಗಗಳಿಂದ ಮಡಿದು ಹೋದ ಅತಿರಥ ಮಹಾರಥರು ತಮ್ಮ ಸೈನಿಕರೊಡನೆ ಪುನರ್ಜೀವ ಪಡೆದು ಸರ್ವಾಭರಣಾಲಂಕೃತರಾಗಿ ನೀರೊಳಗಿಂದ ಎದ್ದು ಬರುತ್ತಾರೆ. ಧೃತರಾಷ್ಟ್ರ ಗಾಂಧಾರಿಯರೂ, ತಮ್ಮ ತಮ್ಮ ದೃಷ್ಟಿಗಳನ್ನು ಮರುಪಡೆದು ತಮ್ಮ ನೂರು ಮಂದಿ ಮಕ್ಕಳನ್ನು ಅವರ ವೈಭವವನ್ನು ನೋಡಿ ಆನಂದಿಸುತ್ತಾರೆ. ಮಹಾಭಾರತದ ಅಂತಿಮ ಹಂತ ಪಾಂಡವರ ಸ್ವರ್ಗಾರೋಹಣ. ಪಾಂಡವರೆಲ್ಲರೂ, ಪಾಂಚಾಲಿಯೊಡನೆ ಸ್ವರ್ಗಾಭಿಮುಖವಾಗಿ ಹಿಮಾಲಯವನ್ನು ಆರೋಹಿಸುತ್ತಿದ್ದಂತೆ ಅನುಕ್ರಮವಾಗಿ ಒಬ್ಬೊಬ್ಬರೂ ದೇಹತ್ಯಾಗ ಮಾಡುತ್ತಾರೆ. ಕೊನೆಯ ಸರದಿ ಯುಧಿಷ್ಠಿರನದು. ಈ ಸಂದರ್ಭದಲ್ಲಿ ಇಂದ್ರನೇ ಯುದಿಷ್ಠಿರನನ್ನು ಸ್ವರ್ಗಕ್ಕೆ ಕೊಂಡೊಯ್ಯಲು ದಿವ್ಯರಥದಲ್ಲಿ ಇಳಿದು ಬಂದು ಅವನನ್ನು ಇದಿರುಗೊಳ್ಳುತ್ತಾನೆ. ಆದರೆ ಒಂದು ಸಂದಿಗ್ಧ ಅವರನ್ನು ಕಾಡುತ್ತದೆ. ಯುಧಿಷ್ಠಿರನು ತನ್ನೊಡನೆ ತನ್ನನ್ನು ಹಿಂಬಾಲಿಸಿದ ಒಂದು ಶ್ವಾನವನ್ನು ಸ್ವರ್ಗಕ್ಕೆ ಕರೆದೊಯ್ಯಲು ಬಯಸುತ್ತಾನೆ. ಆದರೆ ಇಂದ್ರನು ಅದಕ್ಕೆ ಒಪ್ಪುವುದಿಲ್ಲ. ಆತನು ಪ್ರತಿಭಟಿಸಿದಷ್ಟೂ ಶ್ವಾನವನ್ನು ತನ್ನೊಡನೆ ಸ್ವರ್ಗಕ್ಕೆ ಕರೆದೊಯ್ಯುವ ಯುಧಿಷ್ಠಿರನ ನಿರ್ಧಾರ ಬಲವಾಗುತ್ತಾ ಹೋಗುತ್ತದೆ. ತನ್ನನ್ನು ಅಷ್ಟು ಪ್ರೀತಿಯಿಂದ ಹಿಂಬಾಲಿಸಿದ ಆ ಮೂಕ ಪ್ರಾಣಿಯನ್ನು ಅರ್ಧದಲ್ಲೇ ಬಿಟ್ಟುಹೋಗುವುದು ಮಹಾಪಾಪವೆಂಬುದು ಯುಧಿಷ್ಠಿರನ ದೃಢವಾದ ಅಭಿಪ್ರಾಯ. ಅಷ್ಟರಲ್ಲಿ ಯುಧಿಷ್ಠಿರನಿಗೆ ಕ್ಷಣಕಾಲ ನರಕ ಪ್ರಾಪ್ತಿಯೂ ಆಗುತ್ತದೆ. ಅಲ್ಲಿ ತನ್ನ ಸಂಬಂಧಿಗಳು, ಬಂಧು ಮಿತ್ರರು, ರಥಿಕ ಮಿತ್ರರೂ ಅನೇಕ ಸಂಖ್ಯೆಯಲ್ಲಿದ್ದು ನರಳುವುದನ್ನು ಕಾಣುವ ದೌರ್ಭಾಗ್ಯ ಅವನದಾಗುತ್ತದೆ. ಒಂದು ಕ್ಷಣ ಆತ ವ್ಯಥಿತನಾದಾಗ ನರಕದ ದೃಶ್ಯವಿಡೀ ಮಾಯವಾಗಿ ಆತನೂ ಅವರೆಲ್ಲರ ಸಹಿತ ತಾನು ಸ್ವರ್ಗದಲ್ಲಿ ವಿಹರಿಸುತ್ತಿರುವ ದೃಶ್ಯವನ್ನು ಕಂಡು ದಂಗಾಗುತ್ತಾನೆ. ಪ್ರಾಮಾಣಿಕತೆಗೆ ಮತ್ತು ಸ್ವಾಮಿಭಕ್ತಿಗೆ ಬೆಳಕು ಹಿಡಿಯುವ ಈ ಘಟನೆ ನಮ್ಮನ್ನು ಕಲಕಿ ನಮ್ಮ ಮೇಲೆ ಅಚ್ಚಳಿಯದ ಪ್ರಭಾವವನ್ನು ಮೂಡಿಸುತ್ತದೆ. ಇಡೀ ಕಥೆಯೇ ಸೌಂದರ್ಯ–ಧರ್ಮ–ಮಾನವೀಯತೆಗಳ ತ್ರಿವೇಣಿ ಸಂಗಮವಾಗಿ ಕೊನೆಗೊಳ್ಳುತ್ತದೆ.

## ಕೃಷ್ಣಾಯನ :

ದೇವಕೀಪುತ್ರ ಕೃಷ್ಣನ ಹೆಸರು ಛಾಂದೋಗ್ಯ ಉಪನಿಷತ್ತಿನಲ್ಲಿ (೫೦೦ ಕ್ರಿ.ಪೂ.) ಎಲ್ಲೋ ಒಂದೆರಡು ಕಡೆ ಬರುತ್ತದೆ. ಆದರೆ ಮಹಾಭಾರತದಲ್ಲಿ (೩೦೦ ಕಿ.ಪೂ ೨೦೦ ಕ್ರಿ.ಶ.) ಅವನದು ಕೇಂದ್ರ ಪಾತ್ರ. ನಂತರ ಸೇರಿಸಲಾದ ಶ್ರೀಮದ್ ಭಗವದ್ಗೀತೆಯಲ್ಲಿ, ಜ್ಞಾನ ಮತ್ತು ಕರ್ಮಯೋಗದ ಜತೆಜತೆಗೇ ಭಕ್ತಿಯೋಗದಲ್ಲಿ ಆತ್ಮ ಸಮರ್ಪಣೆಯೇ ಮುಕ್ತಿಗೆ ಮಾರ್ಗ ಎಂದು ಹೇಳಲಾಗಿದೆ. ಅಲ್ಲೆಲ್ಲಿಯೂ ಆತನ ಬಾಲಲೀಲೆಗಳ ಪ್ರಸ್ತಾಪವಿಲ್ಲ. ಅವನನ್ನು ದ್ವಾರಕಾಧೀಶನೆಂದೂ, ಆತನು ಅನೇಕ ರಾಜಕುವರರಿಗೆ ಮಿತ್ರನೂ, ಮಾರ್ಗದರ್ಶಕನೂ ಆಗಿದ್ದನೆಂದು ಬಿಂಬಿಸಲಾಗಿದೆ. ಆತನನ್ನು ಹಲವಾರು ಸಂದರ್ಭಗಳಲ್ಲಿ ವಿಷ್ಣುವಿನ ಅವತಾರವೆಂದು ಗುರುತಿಸಲಾಗಿದ್ದರೂ, ಮಾನವ ರೂಪಿನಲ್ಲಿ ಅವತರಿಸಿದಾಗ ಆತನು ಮಹಾದೇವ ಮತ್ತು ಉಮೆಯನ್ನು ಆರಾಧಿಸಿ ಅವರಿಂದ ವರ ಪಡೆದಿದ್ದನೆಂದೂ ಉಲ್ಲೇಖಗಳಿವೆ. ಅದರ ನಂತರದ ಕಾಲದಲ್ಲಿ – ಅಂದರೆ ಭಗವದ್ ಗೀತೆಯ ಸಂಕಲನ ಮತ್ತು ವಿಷ್ಣು ಮತ್ತು ಭಾಗವತ ಪುರಾಣಗಳ ರಚನೆಯ ನಡುವಿನ ಸಮಯದಲ್ಲಿ (ಸುಮಾರು ೧೦ನೇ ಅಥವಾ ೧೧ನೇ ಶತಮಾನದಲ್ಲಿ) ಬಾಲಕೃಷ್ಣನ ಆರಾಧನೆ ಪ್ರಚಲಿತವಾಯಿತು. ಬಾಲಕೃಷ್ಣನು ರಾಜಪೂತ ವಂಶಜರ ಸ್ಥಳೀಯ ದೇವತೆಯಾಗಿದ್ದನೆಂದು ನಂಬಲು ಪ್ರಬಲವಾದ ಕಾರಣಗಳಿವೆ. ಆತನ ನಾಮಧೇಯಗಳಾದ ಗೋಪಾಲ, ಗೋವಿಂದ ಎಂಬುದು ಆತನ



ಕೃಷ್ಣನ ಜನನ (ನಂದಲಾಲ್ ಬೋಸ್ ಚಿತ್ರ)

ಕುಲಕಸುಬು ಪಶುಪಾಲನೆಯೇ ಆಗಿದ್ದಿರಬಹುದು ಎಂಬುದನ್ನು ಸೂಚಿಸುತ್ತದೆ.

ಇಲ್ಲಿ ಕೊಡಲಾದ ಹೆಚ್ಚಿನ ವಿವರಗಳನ್ನು ವಿಷ್ಣುಪುರಾಣ, ಭಾಗವತ ಪುರಾಣ ಮತ್ತು ಪ್ರೇಮಸಾಗರಗಳಿಂದ ಆಯಲಾಗಿದೆ. ದ್ವಾಪರ ಯುಗಾಂತ್ಯದಲ್ಲಿ ರಾಜಪೂತ ವಂಶಜರ ಯಾದವರು– ಚಂದ್ರ ವಂಶಜರು – ಮಥುರೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಯಮುನೆಯ ಇಕ್ಕೆಲಗಳಲ್ಲಿ ವಾಸವಾಗಿದ್ದರು. ಕಥೆಯ ಆರಂಭದಲ್ಲಿ, ಅವರ ಅಧಿಕೃತ ರಾಜನಾದ ಉಗ್ರಸೇನನನ್ನು ಅವನ ಮಗನೇ ಆದ ಕಂಸನು ಪದಚ್ಯುತಗೊಳಿಸಿದ್ದನು. ಕಂಸನು ಉಗ್ರಸೇನನ ರಾಣಿಯಾದ ಪವನರೇಖೆಯ ಮೇಲೆ ನಡೆದ ಅತ್ಯಾಚಾರಗಳಿಂದಲೇ ಜನಿಸಿದ್ದು, ಕ್ರೂರನೂ, ನಿರ್ದಯಿಯೂ ಆದ ರಾಕ್ಷಸನೇ ಆಗಿದ್ದನು. ಕೆಲವು ಯದುವಂಶಿಗಳು ಗೋಕುಲ ಅಥವಾ ಬ್ರಜವೆಂಬ ಗ್ರಾಮೀಣ ಪ್ರದೇಶದಲ್ಲಿ ನೆಲಸಿ, ಮಥುರೆಯ ರಾಜರಾದ ರಾಕ್ಷಸರಿಗೆ ಕಪ್ಪಕಾಣಿಕೆಯನ್ನು ಸಲ್ಲಿಸಿ, ಜೀವನ ನಡೆಸುತ್ತಿದ್ದರು. ಇಲ್ಲಿಯೂ, ರಾಮಾಯಣದಲ್ಲಿದ್ದಂತೆ, ಆಳರಸರು ಮತ್ತು ಸಾಮಂತರ ನಡುವೆ ವೈಷಮ್ಯವಿದ್ದಂತೆ ಕಾಣುತ್ತದೆ. ಇಲ್ಲಿಯೂ ಒಂದು ಶೀಲವಂತ ಸಮಾಜ ಮತ್ತೊಂದು ದುಷ್ಟಪ್ರವೃತ್ತಿಯ ಸಮಾಜವಿದ್ದು, ಶೀಲವಂತ ಸಮಾಜದಲ್ಲಿ ಅವತಾರ ಪುರುಷರು ಮತ್ತು ಅಪ್ರತಿಮ ವೀರರು ಜನಿಸಿ ದುಷ್ಟ ಸಮಾಜವನ್ನು ನಿರ್ಮೂಲನಗೊಳಿಸುವುದು ಕಥಾನಕದ ಕೇಂದ್ರವಸ್ತು. ಭೂಮಿಯು ಕಂಸನ ಕ್ರೌರ್ಯಕ್ಕೆ ತುತ್ತಾಗಿ ಬವಣೆ ಪಡುತ್ತಿರುವಾಗ ದೇವಜನರ ಪ್ರಾರ್ಥನೆಯಂತೆ, ವಿಷ್ಣುವೂ ತನ್ನ ಸಕಲ–ದೇವ, ಋಷಿ, ಕಿನ್ನರ, ಗಂಧರ್ವ ಪರಿವಾರದಿಂದೊಡಗೂಡಿ ಈ ಧರೆಯಲ್ಲಿ ಜನ್ಮ ತಾಳುತ್ತಾನೆ. ಇದು ಶ್ರೀಕೃಷ್ಣನ ಅವತಾರದ ಅರೆ–ಚಾರಿತ್ರಿಕ ಪೂರ್ವ ಕಥೆ.

ಉಳಿದೆಲ್ಲ ಕೃಷ್ಣಾಯನದ ಕಥೆ ಜನಜನಿತವಾದ ವಿವರಗಳ ಹಾದಿಯಲ್ಲೇ ಮುನ್ನಡೆಯುತ್ತದೆ. ಕಥೆಯ ನಡುವಿನಲ್ಲಿ ರಾಧಾಕೃಷ್ಣರ ದಿವ್ಯ ಪ್ರೇಮಪ್ರಸಂಗ ಅನಿವಾರ್ಯ. ಕೃಷ್ಣನು ಮಿತ್ರವಿಂದಾ, ಸತ್ಯಭಾಮಾ, ಸೂರ್ಯಪುತ್ರಿಯಾದ ಕಾಳಿಂದಿ – ಹೀಗೆ ಒಬ್ಬೊಬ್ಬರನ್ನು ವರಿಸಿದಾಗಲೂ ಆತ ಅತಿಮಾನುಷ ಸಾಹಸ ಪ್ರದರ್ಶನದ ನಂತರ ಅವರನ್ನು ಗೆಲುವಿನ ಕಾಣಿಕೆಯನ್ನಾಗಿ ಪಡೆಯುತ್ತಾನೆ.

ಭೌಮಾಸುರನ ಬಂಧನದಿಂದ ರಕ್ಷಿಸಲ್ಪಟ್ಟ ಹಲವು ಸಾವಿರ ಸ್ತ್ರೀಯರೂ ಆತನನ್ನೇ ಆಶ್ರಯಿಸುತ್ತಾರೆ. ಅವನಿಗೆ ಪ್ರತಿಯೊಬ್ಬ ಪತ್ನಿಯಲ್ಲೂ ಹತ್ತುಮಂದಿ ಗಂಡುಮಕ್ಕಳು ಮತ್ತು ಒಂದು ಹೆಣ್ಣು ಮಗು ಜನಿಸುತ್ತಾರೆ. ಎಲ್ಲರೂ ನೀಲವರ್ಣದ ಮೈಯುಳ್ಳವರಾಗಿ, ಕಮಲನಯನರಾಗಿ, ನೀಲ ಮತ್ತು ಪೀತ ಬಣ್ಣದ ವಸ್ತ್ರಧಾರಿಗಳಾಗಿ ಶೋಭಿಸುತ್ತಾರೆ. ಅವರನ್ನು ವೃಷ್ಣಿಗಳೆಂದೂ ಕರೆಯುತ್ತಾರೆ.

ಮತ್ತೆ ಕೊನೆಗೆದುರಾಗುವ ಸ್ವಾರಸ್ಯದ ಘಟನೆ ಶ್ರೀಕೃಷ್ಣನ ದೇಹತ್ಯಾಗ. ಯುದ್ಧದ ಸಮಯದಲ್ಲಿ ಆತನು ಪಾಂಡವ ಪಕ್ಷಪಾತಿಯಾಗಿ, ಅರ್ಜುನನ ಸಾರಥಿಯಾಗುತ್ತಾನೆ. ಯುದ್ಧರಂಗದ ನಡುವೆ ಆತ ಶ್ರೀಮದ್ ಭಗವದ್ ಗೀತೆಯನ್ನು ಪ್ರಸಾದಿಸುತ್ತಾನೆ. ಭೀಷ್ಮನ ಮರಣಕಾಲದಲ್ಲಿ ಆತ ಹಾಜರಿರುತ್ತಾನೆ. ದುರ್ಯೋಧನನ

ಮರಣಾನಂತರ ಆತನು ಗಾಂಧಾರಿಯ ಶಾಪಕ್ಕೊಳಗಾಗುತ್ತಾನೆ – ಆತನು ಇನ್ನು ಮೂವತ್ತಾರು ವರ್ಷಗಳೊಳಗೆ ಏಕಾಂಗಿಯಾಗಿ, ದುಃಖಿತಪ್ತನಾಗಿ ಈ ಲೋಕದಿಂದ ನಿರ್ಗಮಿಸಬೇಕೆಂಬುದೇ ಆ ಶಾಪ. ಅದೇ ಹೊತ್ತಿಗೆ ಸರಿಯಾಗಿ ವೃಷ್ಣಿಗಳೆಲ್ಲರೂ ಅಂತಃಕಲಹದಿಂದ ನಿರ್ನಾಮಗೊಳ್ಳುತ್ತಾರೆ. ಅಂತ್ಯದಲ್ಲಿ ಕೇವಲ ಹೆಂಗಳೆಯರು ಮತ್ತು ಕೃಷ್ಣಬಲರಾಮರು ಉಳಿದುಕೊಳ್ಳುತ್ತಾರೆ. ಬಲರಾಮನು ಕಾಡಿಗೆ ಹೋಗುತ್ತಾನೆ. ಕೃಷ್ಣನು ದ್ವಾರಕೆಯನ್ನು ಮತ್ತು ಅಳಿದುಳಿದ ಸ್ತ್ರೀಯರನ್ನು ಪಾಂಡವರ ರಕ್ಷಣೆಗೊಪ್ಪಿಸಿ ತಾನೂ ಕಾಡಿಗೆ ಹೋಗಿ ತನ್ನ ಬರವನ್ನೇ ಕಾಯುತ್ತಿದ್ದ ಬಲರಾಮನನ್ನು ಕೂಡಿಕೊಳ್ಳುತ್ತಾನೆ. ಒಂದು ವಿಶಾಲ ವೃಕ್ಷದಡಿ ಯೋಗಸ್ಥಿತಿಯಲ್ಲಿ ಕುಳಿತಿದ್ದ ಬಲರಾಮನ ಬಾಯಿಯಿಂದ ಸಾವಿರ ಹೆಡೆಯ ಅನಂತವೆಂಬ ನಾಗ ಹೊರಬಂದು ಸಾಗರವನ್ನು ಸೇರುತ್ತದೆ. ಇದು ಬಲರಾಮನ ಅವಸಾನದ ಸೂಚನೆ. ಗಾಂಧಾರಿಯ ಶಾಪವನ್ನು ಸ್ಮರಿಸಿ, ಯೋಗಸ್ಥಿತಿಯಲ್ಲಿ ಆತ ವಿರಮಿಸುತ್ತಿದ್ದಾಗ, ಅಲ್ಲಿಗೆ ಬಂದ ಬೇಟೆಗಾರನೊಬ್ಬನು ಆತನ ಪದ್ಮಪಾದವನ್ನು ಹರಿಣವೆಂದು ತಿಳಿದು ತನ್ನ ಬಾಣದಿಂದ ಅವನನ್ನು ಘಾಸಿಗೊಳಿಸುತ್ತಾನೆ. ಶ್ರೀಕೃಷ್ಣನನ್ನು ಸಮೀಪಿಸಿದ ಬೇಡನು ತನ್ನ ತಪ್ಪಿಗಾಗಿ ಪರಿತಪಿಸುತ್ತಿದ್ದಾಗ ಶ್ರೀಕೃಷ್ಣನೇ ಅವನನ್ನು ಸಮಾಧಾನಗೊಳಿಸಿ ತಾನೇ ಇಂದ್ರನ ಸ್ವರ್ಗಕ್ಕೇರಿ ತನ್ನ ವೈಕುಂಠವನ್ನು ಸೇರುತ್ತಾನೆ.

ಅರ್ಜುನನ ಪ್ರಯತ್ನಗಳ ಹೊರತಾಗಿಯೂ ಶ್ರೀಕೃಷ್ಣನ ಪತ್ನಿಯರು ದ್ವಾರಕೆಯಲ್ಲಿ ನೆಲೆಸಲು ನಿರಾಕರಿಸಿ, ಸಹಗಮನ ಮಾಡಿಕೊಳ್ಳುತ್ತಾರೆ. ಉಳಿದವರು ಸಂನ್ಯಾಸವನ್ನು ಸ್ವೀಕರಿಸುತ್ತಾರೆ. ಉಕ್ಕಿ ಬಂದ ಸಾಗರವು ಇಡೀ ದ್ವಾರಕೆಯನ್ನೇ ತನ್ನೊಳಗೆ ಸೆಳೆದುಕೊಂಡು ಅದರ ಇರವೇ ಗೋಚರಿಸಿದ ಹಾಗೆ ಮಾಡುತ್ತದೆ.

### ಬುದ್ಧಾಯನ :

ಬುದ್ಧನ ಚರಿತ್ರೆ ಸಂಪೂರ್ಣವಾಗಿ ಕಟ್ಟುಕತೆಯಲ್ಲ ಎಂದು ನಿರ್ಧಾರಿತವಾಗಿ ಹೇಳಬಹುದು. ಅದು ಕ್ರೈಸ್ತನ ಗಾಥೆಯಂತೆ ಚಾರಿತ್ರಿಕವಾದ ಸತ್ಯಘಟನೆಗಳ ಆಧಾರಗಳ ಮೇಲೆ ಬಹುಮಟ್ಟಿಗೆ ನಿಂತಿದೆ. ಸುಮಾರು ಕ್ರಿ.ಪೂ. ಐದನೇ ಶತಮಾನದ ಹೊತ್ತಿಗೆ ಭಾರತವನ್ನು ಮುತ್ತಿದ ಆರ್ಯರು ಪಂಜಾಬಿನಿಂದ ಗಂಗಾಕಣಿವೆಗೆ ವಲಸೆ ಬಂದು ಸಣ್ಣ ಸಣ್ಣ ಹಳ್ಳಿಯಲ್ಲಿ, ಚಿಕ್ಕಪುಟ್ಟ ತುಂಡು ರಾಜ್ಯಗಳನ್ನು ಕಟ್ಟಿಕೊಂಡು ನೆಲೆಸಿದ್ದರು. ಅವರಲ್ಲೊಬ್ಬರಾದ ದೌತ್ಯ ವಂಶಜರು, ವಾರಣಾಸಿಯ ಉತ್ತರದಲ್ಲಿ, ಹಿಮಾಲಯದ ತಪ್ಪಲಿಗೆ ಹತ್ತಿರವಾಗಿದ್ದ ಕಪಿಲವಸ್ತುವಿನಲ್ಲಿ ನೆಲೆಸಿದ್ದರು. ಅವರು ಮುಖ್ಯವಾಗಿ ಬೇಸಾಯ ಮತ್ತು ಪಶುಸಂಗೋಪನೆಯನ್ನು ಅವಲಂಬಿಸಿದ್ದು ಶುದ್ಧೋಧನನೆಂಬುವವನು ಅದರ ರಾಜನಾಗಿದ್ದನು. ಅವನು ನೆರೆಯ ಕೋಳಿಯಾನ್ ಬುಡಕಟ್ಟಿನ ರಾಜನ ಇಬ್ಬರು ಕುಮಾರಿಯರನ್ನು ವಿವಾಹವಾಗಿದ್ದನು. ಇಬ್ಬರೂ ನಡುವಯಸ್ಸು ಕಳೆದರೂ ಸಂತಾನಹೀನರಾಗಿದ್ದರು. ಆದರೆ ಅವರಲ್ಲಿ ಹಿರಿಯಳು ತನ್ನ ೪೫ನೇ ವಯಸ್ಸಿನಲ್ಲಿ (ಸುಮಾರು ೫೬೩ ಕ್ರಿ.ಪೂ.) ಒಬ್ಬ ಗಂಡು ಮಗುವಿಗೆ ಜನ್ಮವಿತ್ತು, ಒಂದು ವಾರದಲ್ಲೇ ಮೃತ್ಯುಗೀಡಾದಳು. ಹುಟ್ಟಿದ ಮಗುವಿಗೆ ಸಿದ್ಧಾರ್ಥನೆಂದು ನಾಮಕರಣ ಮಾಡಲಾಯಿತು. ಅವನ ವಂಶದ ಹೆಸರು ಗೌತಮ. ಗೌತಮನು ತಾರುಣ್ಯದಲ್ಲೇ ಕೋಳಿರಾಜನ ಮಗಳೂ, ತನ್ನ ಸೋದರ ಸಂಬಂಧಿಯೂ ಆದ ಯಶೋಧರೆಯನ್ನು ವಿವಾಹವಾಗಿದ್ದನು. ಓರ್ವನೇ ರಾಜಕುಮಾರನಾದ ಆತನು ಸುಖದ ಸುಪ್ಪತ್ತಿಗೆಯಲ್ಲೇ ಬೆಳೆದುದರಿಂದ ಆತನಿಗೆ ಪ್ರಪಂಚದಲ್ಲಿ ಮಾನವ ಸಹಜವಾಗಿ ಬಂದೊದಗುವ ಯಾವ ಕಷ್ಟ ಕಾರ್ಪಣ್ಯಗಳ ಅನುಭವವೂ ಆಗಲಿಲ್ಲ. ತನ್ನ ೨೯ನೇ ವಯಸ್ಸಿನಲ್ಲಿ ಕಂಡ ನಾಲ್ಕು ವಿಶೇಷ ಘಟನೆಗಳಿಂದ ಅವನಿಗೆ ಜರಾ, ವ್ಯಾಧಿ, ಮರಣಗಳ ಅರಿವಾಯಿತು. ಪ್ರಪಂಚದಿಂದ ವಿಮುಖತೆಯೇ ಈ ಎಲ್ಲಾ ಕಷ್ಟಕೋಟಲೆಗಳಿಂದ ಪಾರಾಗುವ ಏಕಮೇವ ಉಪಾಯವೆಂದು ಆತನಿಗೆ ಸಿದ್ಧವಾಯಿತು. ಪ್ರಾಪಂಚಿಕ ಬಂಧನಗಳಿಂದ ಅಸಂತುಷ್ಟಗೊಂಡ ಆತನು, ತನ್ನ ಹತ್ತು ವರ್ಷ ವಯಸ್ಸಿನ ಮಗನನ್ನು ತ್ಯಜಿಸಿ, ತನ್ನ ಶಯ್ಯಾಗೃಹದಿಂದ ನಡುರಾತ್ರಿಯಲ್ಲಿ ಹೊರ ನಡೆದಾಗ, ಆತನ ಬಳಿ ಇದ್ದದು ಆತನ ಒಂದು ಕುದುರೆ ಮತ್ತು ಚನ್ನನೆಂಬ ಒಬ್ಬ ನಂಬುಗೆಯ ಕಾಸ್ತಾರ ಮಾತ್ರ.

ಹಾಗೆ ರಾಜಗೃಹದ ಸವಲತ್ತುಗಳನ್ನು ತ್ಯಜಿಸಿ ಹೊರಬಿದ್ದ ಗೌತಮನು ವಿಂಧ್ಯಪರ್ವತಾವಳಿಯಲ್ಲಿ ರಾಜಗೃಹದ ಸಾಧು ಸಂತರನ್ನೆಲ್ಲಾ ಸಂಧಿಸಿ, ಅವರಿಂದ ಪಡೆದ ಅರಿವಿನಿಂದ ಸಂತುಷ್ಟನಾಗದೆ, ಏಕಾಂಗಿಯಾಗಿ ಕಾಡನ್ನು ಸೇರಿ ಅಲ್ಲಿ ಏಕಾಂತ ಧ್ಯಾನದಲ್ಲಿ ತೊಡಗುತ್ತಾನೆ. ಅಲ್ಲಿ ದೀರ್ಘಕಾಲ ಕಠಿಣತಮ ತಪಸ್ಸನ್ನು ಮಾಡಿದ ಫಲವಾಗಿ ಆತನಿಗೆ ಏನೂ ಜ್ಞಾನೋದಯವಾಗದಿದ್ದರೂ, ಆತನು ಬಹಳ ದೊಡ್ಡ ಸಂತನೆಂದು ಹೆಸರುಗಳಿಸುತ್ತಾನೆ. ನಂತರ ಇಂತಹ



ಬುದ್ಧನ ನಿರ್ವಾಣ (ಅಬನೀಂದ್ರನಾಥ ಠಾಗೋರರ ಚಿತ್ರ)

ಜೀವನ ಶೈಲಿಯ ಅನುಪಯುಕ್ತತೆಯನ್ನು ಕಂಡುಕೊಂಡ ಆತ ಮಗದೊಮ್ಮೆ ಸಾಮಾನ್ಯ ಜೀವನಕ್ಕೆ ಹಿಂತಿರುಗುತ್ತಾನೆ- ಫಲವಾಗಿ ತನ್ನ ಪ್ರಸಿದ್ಧಿಯನ್ನೂ ಶಿಷ್ಯರನ್ನೂ ಕಳೆದುಕೊಳ್ಳುತ್ತಾನೆ.

ಇದೇ ಸಮಯದಲ್ಲಿ ಕುಟಿಲನಾದ ಮಾರನು ಅವನಿಗೊಡ್ಡಿದ ಆಮಿಷಗಳ ಕಥೆ ನಮಗೆ ತಿಳಿದೇ ಇದೆ. ಆದರೆ ಇವಾವುಗಳಿಗೂ ಬಲಿಬೀಳದ ಗೌತಮನು ನೈದಂಜಾರ ನದೀತೀರದಲ್ಲಿ ಒಂದು ಬೋಧಿವೃಕ್ಷದ ಕೆಳಗೆ ಕುಳಿತು ಧ್ಯಾನಸ್ಥಿತನಾದಾಗ ಅವನಲ್ಲಿದ್ದ ಎಲ್ಲಾ ಅನುಮಾನಗಳು ಪರಿಹಾರವಾಗಿ ಅವನು ಜ್ಞಾನದ ಬೆಳಕನ್ನು ಪಡೆದು ಬುದ್ಧನಾಗುತ್ತಾನೆ.

ಆದರೆ ಅವನಿಗೆ ಲಭಿಸಿದ ಜ್ಞಾನಸಿದ್ಧಿಯನ್ನು ಇತರರೊಡನೆ ಹಂಚಿಕೊಳ್ಳುವ ಬಗೆ ಹೇಗೆ? ಇದಕ್ಕಾಗಿ ಆತನು ವಾರಣಾಸಿಗೆ ಸೇರಿ ಅಲ್ಲಿ ಧರ್ಮಚಕ್ರವನ್ನು ಸ್ಥಾಪಿಸಿ ಒಂದು ಸತ್ಯ ಮತ್ತು ಧರ್ಮದ ವಿಶ್ವಸಾಮ್ರಾಜ್ಯವನ್ನು ಸ್ಥಾಪಿಸಲು ಉದ್ಯುಕ್ತನಾಗುತ್ತಾನೆ. ಮೊದ ಮೊದಲು ಆತನ ತತ್ತ್ವ ಸಿದ್ಧಾಂತಗಳು ಜನಪ್ರಿಯವಾಗದಿದ್ದರೂ, ಆತನ ಹೆತ್ತವರೂ, ಪತ್ನಿ ಮತ್ತು ಪುತ್ರನೂ ಆತನ ಶಿಷ್ಯತ್ವವನ್ನು ಸ್ವೀಕರಿಸುತ್ತಾರೆ. ಬಳಿಕ ಆತನು ಒಂದು ಸಂನ್ಯಾಸಿ ಪಡೆಯನ್ನೂ, ಮತ್ತು ಬಹಳಷ್ಟು ನಿರಾಸಕ್ತಿಯಿಂದ ಒಂದು ಸಂನ್ಯಾಸಿನಿಯರ ಪಡೆಯನ್ನೂ ಧರ್ಮಪ್ರಚಾರದ ಸಲುವಾಗಿ ಸ್ಥಾಪಿಸಿ, ಕೊನೆಗೆ ಸುಮಾರು ಕ್ರಿ.ಪೂ. ೪೮೩ ರಲ್ಲಿ ನಿರ್ವಾಣವನ್ನು ಹೊಂದುತ್ತಾನೆ.

ಬುದ್ಧನ ವೈಯಕ್ತಿಕ ಜೀವನದ ಹೆಚ್ಚಿನ ವಿವರಗಳು ನಮಗೆ ಲಭ್ಯವಿಲ್ಲದಿದ್ದರೂ, ಆತನ ಉಪದೇಶದ ವಿವರಗಳು ನಮಗೆ ಸಾಕಷ್ಟು ಅಧಿಕೃತವಾಗಿ ಮತ್ತು ವಿವರವಾಗಿ ಲಭ್ಯವಿವೆ. ಕಾಲ ಕಳೆದಂತೆ ಆತನ ವ್ಯಕ್ತಿ ವಿಶೇಷದ ಕಲ್ಪನೆ ಬದಲಾಗುತ್ತಿದ್ದರೂ ಆತನ ಉಪದೇಶವು ಸುಮಾರು ಕಿ.ಪೂ. ೨೫೦ ರಿಂದಲೂ ಏಕಸ್ರೋತವಾಗಿ ರಕ್ಷಿಸಲ್ಪಟ್ಟಿದೆ. ವಿಶ್ವದಾದ್ಯಂತ ಸುಪರಿಚಿತವಾಗಿದೆ. ಕೌತುಕದ ವಿಷಯವೇನೆಂದರೆ, ಬುದ್ಧನು ಹುಟ್ಟು, ಬದುಕು, ಸಾವಿನ ಮೂರು ಘಟ್ಟಗಳಲ್ಲೂ ಹಿಂದುವಾಗಿಯೇ ಇದ್ದುದರಿಂದ ಆತನು ಉಪದೇಶಿಸಿದ ತತ್ತ್ವ ಸಿದ್ಧಾಂತಗಳಲ್ಲಿ ಯಾವುವೂ ಹಿಂದೂ ತತ್ತ್ವ ಸಿದ್ಧಾಂತಗಳಿಂದ ಮೂಲಭೂತವಾಗಿ ಭಿನ್ನವಾಗಿರಲಿಲ್ಲ. ಆದರೂ ಬುದ್ಧನ ಅದ್ಭುತ ವ್ಯಕ್ತಿತ್ವ, ಆತನ ಮಧುರ ಸಂವಹನದ ರೀತಿ, ಆತನ ಅಸೀಮ ಧೈರ್ಯ ಮತ್ತು ಆತನು ಸಾಮಾನ್ಯ ವ್ಯಕ್ತಿಗೂ ಎಟುಕುವಂತೆ ತನ್ನ ಸಿದ್ಧಾಂತಗಳನ್ನು ನಿರೂಪಿಸಿದ ಶೈಲಿ – ಆತನ ಮತವು ಜಗತ್ತಿನಲ್ಲೆಲ್ಲಾ ಹರಡುವುದರಲ್ಲಿ ಯಶಸ್ವಿಯಾಯಿತು.

ಇಷ್ಟು ಚಾರಿತ್ರಿಕ ಸತ್ಯವಾಗಿದ್ದರೆ, ಆತನಿಗೆ ಸಂಬಂಧಿಸಿದಂತೆ ಪ್ರಚಾರದಲ್ಲಿರುವ ಪೌರಾಣಿಕ ಮತ್ತು ದಂತಕಥೆಗಳೂ ಅಸಂಖ್ಯ. ಸುಮೇಧನು ಬುದ್ಧನಾಗಿ ಚುನಾಯಿತನಾದುದು, ಆರು ದಂತಗಳ ಆನೆಯ ಕಥೆ, ಚಂದ್ರ ಮತ್ತು ಮೊಲದ ಚಿಹ್ನೆ, ಇತರ ಜಾತಕ ಕಥೆಗಳು, ಆತನ ಪಾರಿವ್ರಾಜಿಕ ದಿನಗಳು, ಆತನು ಶಾಕ್ಯ ಮತ್ತು ಕೋಳಿಪಂಗಡಗಳ ಸಂಭಾವ್ಯ ಯುದ್ಧವೊಂದನ್ನು ತಡೆದುದು ಹಾಗೂ ಆತನ ಪರಿನಿರ್ವಾಣದ ಗಾಥೆ, ಜನಪ್ರಿಯ ಹಾದಿಯಲ್ಲಿಯೇ ನಡೆದು ಮುಕ್ತಾಯಗೊಳ್ಳುತ್ತದೆ.

**ಶಿವಾಖ್ಯಾನ :**

ಇದು ದೇವ ಮತ್ತು ಋಷಿಗಣಗಳು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರರೂಪವಾಗಿ ಬ್ರಹ್ಮನೇ ನಿರೂಪಿಸಿದ ಕಥೆ :

''ಬ್ರಹ್ಮನ ಒಂದು ರಾತ್ರಿಯಲ್ಲಿ, ವಿಶ್ವವೆಲ್ಲವೂ ಒಂದು ಸಮಾನ ನಿದ್ರೆಯಲ್ಲಿ ನಿಶ್ಚಲವಾಗಿ ಮಲಗಿದ್ದಾಗ, ನಾನು ಈ ವಿಶ್ವಾತ್ಮನಾದ ಸಹಸ್ರಾಕ್ಷನಾದ, ಸರ್ವವ್ಯಾಪಿಯಾದ, ಏಕಕಾಲದಲ್ಲಿ ಜೀವನೂ ಅಜೀವನೂ ಆಗಿದ್ದ, ನಿರಾಕಾರ ಜಲರಾಶಿಯಲ್ಲಿ ಸಾವಿರ ಹೆಡೆಯ ಅನಂತನ ಮೇಲೆ ಪವಡಿಸಿದ್ದ ಈ ನಾರಾಯಣನನ್ನು ನೋಡಿದೆ. ನಾನು ಈ ವಿಸ್ಮಯವನ್ನು ಕಂಡು, ಭ್ರಾಂತನಾಗಿ, ಈ ಸನಾತನ ಅಸ್ತಿತ್ವವನ್ನು ನನ್ನ ಕೈಗಳಿಂದ ಮೃದುವಾಗಿ ಮುಟ್ಟಿ, ''ನೀನ್ಯಾರು? ಮಾತನಾಡು'' ಎಂದು ಕೇಳಿದೆ. ಆಗ ಆ ಕಮಲನಯನನು ಅರೆ ಮುಚ್ಚಿದ ಕಣ್ಣುಗಳಿಂದ ನನ್ನ ಕಡೆ ನೋಡುತ್ತಾ, ಎದ್ದು, ನಸುನಗುತ್ತಾ ''ಸ್ವಾಗತ, ಮಗೂ, ಪ್ರಭಾಮಯನಾದ ಪ್ರಜಾಪಿತನೇ'' ಎಂದಾಗ ನನಗೆ ಮುನಿಸುಂಟಾಗಿ, ''ಇದೇನಿದು, ಆದಿದೇವನೆ, ಎಲ್ಲಾ ಸೃಷ್ಟಿ, ವಿನಾಶಗಳಿಗೆ ಕಾರಣನಾದ, ಅಸಂಖ್ಯ ಪ್ರಪಂಚಗಳ ಕರ್ತನಾದ, ಎಲ್ಲಾ ಆತ್ಮಗಳಿಗೆ ಮೂಲನಾದ ನನ್ನನ್ನು ಓರ್ವ ಅಧ್ಯಾಪಕನು ಒಬ್ಬ ಹಸುಳೆಯನ್ನು ಕರೆಯುವಂತೆ 'ಮಗುವೇ' ಎಂದು ಕರೆದೆಯಲ್ಲ! ಇದೇಕೆ ನೀನು ಇಂತಹ ಅವಿವೇಕತನದ ಮಾತುಗಳನ್ನಾಡುತ್ತಿರುವೆ?'' ಎಂದು ಕೇಳಿದೆ. ಆಗ ವಿಷ್ಣುವು, ''ಹಾಗಾದರೆ ಕೇಳು! ನಾನು ನಾರಾಯಣನು! ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳಿಗೆ ಮೂಲ ಕಾರಣನು, ಸನಾತನ ಪುರುಷನು ಮತ್ತು ವಿಶ್ವದ ಅನಂತ ಮೂಲನು. ನೀನು ನನ್ನ ಈ ಅವಿನಾಶಿ ಶರೀರದಿಂದ ಹುಟ್ಟಿರುವೆ'' ಎಂದನು.

''ಆಗ ನಮ್ಮೊಳಗೊಂದು ತೀವ್ರ ವಾಗ್ವಾದ ತೊಡಗಿತು. ಆಗ ನಮ್ಮ ಚರ್ಚೆಗೆ ಮಂಗಲ ಹಾಡಲೇನೋ ಎಂಬಂತೆ ನಮ್ಮೆದುರು ಒಂದು ಅಭೂತಪೂರ್ವ, ಪ್ರಭಾವಂತ ಲಿಂಗವು ಪ್ರತ್ಯಕ್ಷವಾಯಿತು ಅದೊಂದು ನೂರಾರು ವಿಶ್ವಗಳನ್ನೇ ಕಬಳಿಸುವ ಭಯಂಕರ ಜ್ವಾಲೆಗಳನ್ನು ಉಗುಳುವ ಕಂಬದಂತಿದ್ದು, ಅದಕ್ಕೆ ಯಾವುದೇ ಆದಿ, ಮಧ್ಯ, ಅಂತ್ಯಗಳಿಲ್ಲದಂತೆ ಕಂಡು ಬಂದು ಅದು ಅದ್ವಿತೀಯವೂ, ಅನಿರ್ವಚನೀಯವೂ ಆಗಿ ಕಂಗೊಳಿಸುತ್ತಿತ್ತು. ಇಂತಹ ಸಹಸ್ರ ಜ್ವಾಲೆಗಳನ್ನು ನೋಡಿ ಬೆಚ್ಚಿದ ವಿಷ್ಣುವು, ಅಷ್ಟೇ ದಂಗುಬಡಿದಂತಿದ್ದ ನನ್ನನ್ನುದ್ದೇಶಿಸಿ ಹೀಗೆ ಹೇಳಿದನು, 'ನಾವು ತಕ್ಷಣವೇ ಈ ಜಾಜ್ವಲ್ಯಮಾನ ಲಿಂಗದ ಅಸ್ತಿತ್ವದ ಮೂಲವನ್ನು ಶೋಧಿಸೋಣ. ನಾನು ಕೆಳಮುಖವಾಗಿ ಇಳಿಯುತ್ತೇನೆ. ನೀನು ನಿನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸಿ ಮೇಲ್ಮುಖವಾಗಿ ಹೋಗು.' ಇಷ್ಟು ಹೇಳಿ ಆತನು ಸಾವಿರ ಯೋಜನ ಗಾತ್ರದ, ಬಿಳಿಯ ಕೋರೆ ದಾಡೆಗಳುಳ್ಳ, ಉದ್ದವಾದ ಮೂತಿಯುಳ್ಳ, ಭಯಂಕರವಾಗಿ ಗುಂಟುರು ಹಾಕುವ, ಗಿಡ್ಡ ಕಾಲುಗಳ, ಬಲಿಷ್ಠ, ಸಾಟಿಯೇ ಇಲ್ಲದಷ್ಟು ಮಿರುಗುವ ದೇಹದ ವರಾಹರೂಪವನ್ನು ತಳೆದು ಆಳಕ್ಕೆ ಧಾವಿಸಿದನು. ಹೀಗೆ ಸಾವಿರಾರು ವರ್ಷಗಳ ಕಾಲ ಆತನು ಕೆಳಮುಖವಾಗಿ ಆಳದಿಂದ ಆಳಕ್ಕೆ ಇಳಿದರೂ ಆತನಿಗೆ ಆ ಲಿಂಗದ ತಳವೂ ದೊರಕಲಿಲ್ಲ. ಅದೇವೇಳೆ,

ನಾನೂ ಬಿಳಿಮೈಯ, ಉರಿಯುವ ಕಣ್ಣುಗಳ, ಪ್ರತಿ ದಿಕ್ಕಿನಲ್ಲೂ ರೆಕ್ಕೆಗಳುಳ್ಳ, ಮನಸ್ಸಿನಷ್ಟು ವೇಗವಾಗಿ ಚಲಿಸುವ ಹಂಸವಾಗಿ ಸಾವಿರ ವರ್ಷಗಳ ಪರ್ಯಂತ ಆ ಸ್ತಂಭದ ಮೇಲೇರುತ್ತ ಹಾರಿಹೋದರೂ ಅದರ ಶಿಖರವನ್ನು ಪತ್ತೆ ಹಚ್ಚಲಾಗಲಿಲ್ಲ. ಆಗ ನಾನು ಕೆಳಗಿಳಿದು ಬಂದು, ಈಗಾಗಲೇ ಮೇಲ್ಮುಖವಾಗಿ ಮರಳುತ್ತಿರುವ ಅತಿ ಆಯಾಸಗೊಂಡ ವಿಷ್ಣುವಿನೊಡನೆ ಕೂಡಿಕೊಂಡೆನು.

''ಆಗ ಶಿವನು ನಮ್ಮೆದುರು ಪ್ರತ್ಯಕ್ಷನಾಗಿ ನಿಂತನು. ಅವನ ಮಾಂತ್ರಿಕತೆಯಿಂದ ಪರವಶರಾಗಿದ್ದ ನಾವು ಅವನಿಗೆ ನಮಿಸುತ್ತಿರಲಾಗಿ, ಅಲ್ಲಿ ಅವನ ಪ್ರತಿಯೊಂದು ಕೈತುದಿಗಳಿಂದಲೂ ಪವಿತ್ರ 'ಓಂ' ಕಾರವು ಸ್ಪಷ್ಟವಾಗಿ ಮತ್ತು ಸ್ಫುಟವಾಗಿ ಮೇಲೇರಿತು. ನಾರಾಯಣನು ಅವನನ್ನುದ್ದೇಶಿಸಿ, 'ನಮ್ಮ ಪ್ರಯತ್ನಗಳು ಈಗ ಸಾರ್ಥಕವಾದವು. ನಮ್ಮ ಜಗಳವನ್ನು ಪರಿಹರಿಸಲು ನೀನೇ ಪ್ರತ್ಯಕ್ಷನಾಗಿಬಿಟ್ಟೆ' ಎಂದನು. ಆಗ ಶಿವನು ವಿಷ್ಣುವಿಗೆ ಹೀಗೆಂದು ಉತ್ತರಿಸಿದನು: 'ನೀನು ನಿಜವಾಗಿಯೂ ವಿಶ್ವಗಳ ಸೃಷ್ಟಿ, ಸ್ಥಿತಿ ಲಯಗಳಿಗೆ ಕಾರಣನು. ನೀನು, ಮಗೂ, ಈ ಚರಾಚರ ಜಗತ್ತನ್ನು ನೀನೇ ಪಾಲಿಸುತ್ತಿರುವೆ. ನಾನಾದರೋ, ಬ್ರಹ್ಮ, ವಿಷ್ಣು, ರುದ್ರರ ಅಭೇದ ಮೂರ್ತಿಯಾದ ಪರಮಪಿತನಾಗಿದ್ದೇನೆ. ಯುಗಾಂತರ ಕಳೆದಾಗ ಈ ಬ್ರಹ್ಮನು ಮಗದೊಮ್ಮೆ ನಿನ್ನಿಂದ ಜನಿಸಿ ನೀವಿಬ್ಬರೂ ಪುನಃ ನನ್ನನ್ನು ನೋಡಲಿರುವಿರಿ' ಎಂದು ಹೇಳಿ ಆ ಮಹಾದೇವನು ಅದೃಶ್ಯನಾದನು. ಅಂದಿನಿಂದ ಮೂರು ಲೋಕಗಳಲ್ಲಿಯೂ ಲಿಂಗಾರಾಧನೆ ಪ್ರಚಲಿತವಾಯಿತು.''

ನಂತರದಲ್ಲಿ ಬರುವ ಸತಿಯ ಕಥೆ, ಶಿವನ ರುದ್ರತಾಂಡವ, ದಕ್ಷಪ್ರಜಾಪತಿಯ ಪ್ರಸಂಗ, ಉಮೆಯಾಗಿ ಸತಿಯ ಪುನರಾವತಾರ, ಶಿವನ ಗಣಗಳಾದ ವ್ಯಾಘ್ರಪಾದ, ಕಣ್ಣಪ್ಪ – ಇತರ ಸಂತರಾದ ಮಾಣಿಕ್ಯ ವಾಚಕರ್, ಇವೆಲ್ಲವೂ ಪ್ರಚಲಿತ ಕಥೆಗಳನ್ನೇ ಅನುಸರಿಸಿವೆ. ಇವುಗಳೆಲ್ಲದರ ನಡುವೆ ಮನ ಸೆಳೆಯುವ ಪ್ರಮುಖ ಅಂಶವೆಂದರೆ ಚಿದಂಬರಂ (ಅಥವಾ ತಿಲ್ಲೈ ಮಂದಿರ) ದಲ್ಲಿ ನಡೆದುದೆಂದು ಹೇಳಲಾಗುವ ಶಿವತಾಂಡವದ ಕಥೆ. ಇದು ವಿಶ್ವದ ಸೃಷ್ಟಿ, ಸ್ಥಿತಿ, ಲಯಕರ್ತೃನಾದ ಶಿವನು ವಿಶ್ವದ ಎಲ್ಲಾ ಚಟುವಟಿಕೆಗಳ ಸೂತ್ರಧಾರನಾಗಿರುವನೆಂದು ಸಾಂಕೇತಿಸುತ್ತದೆ. ಇನ್ನೊಂದು ರೀತಿಯಲ್ಲಿ ನೋಡಿದರೆ ಆತ ಸ್ಮಶಾನವಾಸಿಯಾಗಿದ್ದು–ಎಲ್ಲಾ ಸ್ಥಳಗಳಿಗಿಂತಲೂ ಅಶುಚಿಯಾದ ಮತ್ತು ಭಯಂಕರವಾದ ಸ್ಥಳದಲ್ಲಿ– ಅವನು ಅವಶ್ಯವಾಗಿ ಆರ್ಯರಿಗಿಂತಲೂ ಪೂರ್ವದ ತಾಮಸಿಕ ಪ್ರತಿಮೆಯಾಗಿ ಕಂಡುಬರುತ್ತಾನೆ. ಆದರೆ ಶಿವಭಕ್ತರು ನಂತರ ಆತನ ನೃತ್ಯರಂಗವನ್ನು ಪವಿತ್ರವಾದ ಚಿದಂಬರಂಗೆ ಸ್ಥಾನಾಂತರಗೊಳಿಸಿರುವುದಷ್ಟೇ ಅಲ್ಲ, ಆತನ ತಾಂಡವ ನೃತ್ಯದಲ್ಲಿ ಎಲ್ಲಾ ಪಾತಕಗಳನ್ನು ನಾಶಗೊಳಿಸುವ ಶಕ್ತಿಯನ್ನು ಕಾಣುತ್ತಾರೆ.

### ಇತರ ಪೌರಾಣಿಕ, ಮಹಾಕಾವ್ಯಗಳಲ್ಲಿನ ಮತ್ತು ವೈದಿಕ ಕಥೆಗಳು

ಈ ಖಂಡದಲ್ಲಿ ಸಾಗರ ಮಂಥನ, ಗಂಗಾವತರಣ, ನಾಗದೇವತೆಯಾದ ಮಾನಸಾದೇವಿಯ ಕಥೆ, ಗಜೇಂದ್ರಮೋಕ್ಷ, ನಚಿಕೇತ ಮತ್ತು ಯಮ, ಕಚ ದೇವಯಾನಿ, ಪುರೂರವ ಮತ್ತು ಊರ್ವಶಿ, ಸತ್ಯವಾನ ಸಾವಿತ್ರಿಯ ಕಥೆ, ಶ್ಯಮಂತಕೋಪಾಖ್ಯಾನ, ನಳ ದಮಯಂತಿಯ ಕಥೆ, ಭೀಷ್ಮನು ಯುಧಿಷ್ಠಿರನಿಗೆ ಅರುಹಿದ ಮರ ಮತ್ತು ಪಕ್ಷಿಯ ಕಥೆ, ರಾಜ, ಪಾರಿವಾಳ ಮತ್ತು ಗಿಡುಗನ ಕಥೆ, ನಹುಷನ ಕಥೆ, ಮರಣಾನಂತರ ಸಾತ್ವಿಕ ಮನುಷ್ಯರು ಅನುಭವಿಸಲಿರುವ ವಿವಿಧ ಸ್ಥಿತಿಗಳನ್ನು ವರ್ಣಿಸುವ ಗೌತಮನೆಂಬ ಗಜದ ಕಥೆ, ವಿಕ್ರಮಾದಿತ್ಯ ಸಿಂಹಾಸನದ ಕಥೆ, ಅಶ್ವಿನೀ ದೇವತೆಗಳ ಕಥೆ, ಧ್ರುವ ಚರಿತ್ರೆ, ಶನಿ ಮಹಾತ್ಮೆ, ಅಗಸ್ತ್ಯರ ಮಹಾತ್ಮೆ ಇತ್ಯಾದಿ ಹತ್ತು ಹಲವು ಕಥಾಪ್ರಸಂಗಗಳಿದ್ದು ಈ ಪುಸ್ತಕ ಓದುಗನ ಹೃನ್ಮನಗಳನ್ನು ತಣಿಸುವುದಲ್ಲದೆ, ತಾರಾಮಂಡಲ ಮತ್ತು ಧ್ರುವನಕ್ಷತ್ರಗಳ ಹಿಂದಿರುವ ಜ್ಞಾನವಿಜ್ಞಾನಗಳನ್ನು ಬಹುಮಟ್ಟಿಗೆ ವಿವರಿಸುತ್ತವೆ.

### ಉಪಸಂಹಾರ

ಈ ಕೊನೆಯ ಖಂಡದಲ್ಲಿ, ದೇವರು, ದೇವರ ಬಹು ನಾಮಗಳು, ವಿಶ್ವದ ಆಯಾಮಗಳು, ಸಮಯದ ಅಳತೆ, ಪೌರಾಣಿಕ ಭೌಗೋಳಿಕ ವಿವರಗಳು, ವೇದಾಂತದ ಹಿನ್ನೆಲೆ, ತತ್ತ್ವಜ್ಞಾನ, ಮಾನವ ಸಮಾಜ, ವಿವಾಹ, ತ್ಯಾಗ ಇತ್ಯಾದಿ ಗಹನ ವಿಚಾರಗಳ ಮಂಥನ ನಡೆದಿದೆ. ಅವೆಲ್ಲವುದರ ಬಗ್ಗೆ ವಿವರವಾಗಿ ಪರಾಮರ್ಶಿಸುವುದು ಈ ಲೇಖನದ ವ್ಯಾಪ್ತಿಯನ್ನು ಮೀರಿದೆ ಎನ್ನಲು ಖೇದವಾಗುತ್ತದೆ.

### ಕೊನೆಯಮಾತು

ಸರಳವಾಗಿ ಹೇಳುವುದಾದರೆ ಈ ಪುಸ್ತಕವೊಂದು ಹಲವು ಕಾರಣಗಳಿಂದಾಗಿ ಓದಲೇಬೇಕೆನಿಸುವ ಅನನ್ಯಕೃತಿ. ೨೦೦೧ರಲ್ಲಿ ಪ್ರಕಟವಾದ ಈ ಕೃತಿ ೨೦೧೨ರಲ್ಲಿ ಮರುಮುದ್ರಣ ಕಂಡಿರುವುದು. ಇದನ್ನು ಸ್ವಾಗತಿಸಿದ ಓದುಗರ ಮತ್ತು ವಿದ್ವಜ್ಜನರ ಅಭಿರುಚಿಗೆ ಸಂದ ಗೌರವವಾಗಿದೆ. ಉತ್ತರಾಖಂಡದ ಮಾಯಾವತಿಯಲ್ಲಿರುವ ಅದ್ವೈತ ಆಶ್ರಮದಿಂದ ಬೆಳಕಿಗೆ ತರಲಾಗಿರುವ ಈ ಕೃತಿಯ ಮೊದಲನೇ ಆವೃತ್ತಿ ಕಲ್ಕತ್ತಾದ ಪುಸ್ತಕ ಮೇಳದಲ್ಲಿ ವೆಸ್ಟ್ ಬೆಂಗಾಲ್ ಮಾಸ್ಟರ್ ಪ್ರಿಂಟರ್ಸ್ ಎಸೋಸಿಯೇಶನ್ ಕೊಡಮಾಡಿದ ೨೦೦೧–೦೨ನೇ ಸಾಲಿನ '**ಅತ್ಯುತ್ತಮ ಪ್ರಕಟಿತ ಕೃತಿ ಪ್ರಶಸ್ತಿ**'ಗೆ ಭಾಜನವಾಗಿದೆ. ಸಹೃದಯರಿಗೆ ಇನ್ನೇನು ಮುದಕೊಟ್ಟೀತು? ❖



**ಕಲಾವಿದರು: (ಹಿಂದೆ) ದುರ್ಗೇಶಚಂದ್ರ ಸಿನ್ಹ, ಅಸಿತ್‌ಕುಮಾರ್ ಹಾಲ್‌ದಾರ್, ಶೈಲೇಂದ್ರನಾಥ ದೇ, ಖಿತೀಂದ್ರನಾಥ ಮಜುಂದಾರ್, (ನಡುವೆ) ಕೆ. ವೆಂಕಟಪ್ಪ, ನಂದಲಾಲ್ ಬೋಸ್, (ಕೆಳಗೆ) ಸತ್ಯೇಂದ್ರನಾಥ ದತ್ತ, ಅಬನೀಂದ್ರನಾಥ ಠಾಗೋರ್, ಹಕೀಂ ಮಹಮ್ಮದ್‌ಖಾನ್, ಸುರೇಂದ್ರನಾಥ ಕರ್.**